ಮೈಸೂರ ಗೆಜೆಟ್.

ನಂ. 3 ಸರ್ಕಾರದಿಂದ ಛಾಯಿಷ್ ಆದ್ದು. ಸನ್ 1890

ಬೆಂಗಳೂರು, ಶನಿವಾರ, ಜನವರಿ ತಾ|| 25, ಸನ್ 1890.

☞ ಈ ಭಾಗವನ್ನು ಪ್ರತ್ಯೇಕ ಸೇರಿಸಿ ಇಡುವ ಬಗ್ಯೆ ಇದಕ್ಕೆ ಬೇರೆಯಾಗಿ ಪುಟ ಸಂಖ್ಯೆ ಕೊಡಲ್ಪಡುತ್ತೆ.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜಿಯವರು, ಸರ್ವೇ ವ ಇನಾಂ ಸೂಪರ್ಇಂಟೆಂಡೆಂಟರು, ಕಾಂಪ್‌ಟ್ರೋಲರವರು, ಪಬ್ಲಿಕ ವರ್ಕ್ಸ ಆಫಿಸರ್‌ಗಳು, ಫಾರೆಸ್ಟು ಇನ್‌ಸ್ಪೆಕ್ಟರ್ ಜನರಲ್‌ಯವರು, ರೆಜಿಸ್ಟ್ರೇಷನ್ ಇನ್‌ಸ್ಪೆಕ್ಟರ್ ಜನರಲ್ಲವರು, ಮ್ಯುನಿಸಿಪೆಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷನ್ ಜಡ್ಜೀರು, ಡಿ|| ಡೆಪ್ಯುಟಿ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ ಸೂಪರ್ಇಂಟೆಂಡೆಂಟರು, ಫಾರೆಸ್ಟು ಆಫಿಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತೀ ರಿಪೋರ್ಟುಗಳು; ಪೋಸ್ಟಾಫಿಸ್ ನೋಟಿಸ್‌ಗಳು.

3ನೇ ಭಾಗ–ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷನ್‌ಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಇಲ್ಲ.

೧ನೇ ಭಾಗ.

ಶ್ರೀಮನ್ ಮಹಾರಾಜ ರಾಜಾಸಾಹೆಬ್ ಬಹದೂರವರ ಸರ್ಕಾರದಿಂದ ಕೊಡೋಣಾದ ಇಸ್ತಿಹಾರ್‌ನಾಮೆ.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 17ನೇ ಡಿಶಂಬರ್ 1889.

ನಂ. 271.–ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡೀ ಗ್ರಾಮವು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಯೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಕಡದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಖ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂಧಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮವುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ, ಇರುವ ಗಲ್ಲತಗಳಿಗೆ ಸರಕಾರದವರು ಜವಾಬ್ದಾರರಲ್ಲನೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲಿನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡಿದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಪೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕಿ ಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಕಡೂರು	ಮೂಡ್ಲಗೆರೆ.	ಗೋಣಿಬೀಡು	ಜೋಡೀ ಗೋಣಿಬೀಡು ಆಗ್ರಹಾರ ಅದರ ದಾಖಲೆ ಗ್ರಾಮಗಳು ಸಹ	1 ಸುಬ್ಬರಾಯ ಭಟ್ಟು 2 ಮಂಜಭಟ್ಟು 3 ರಾಮಣ್ಣಾ ವಗೈರೆ	ಖಂ. ಕೊ. ಪ. 3610 3 0	ರೂ. ಆ. ಪೈ. 4385 3 1	ರೂ. ಆ. ಪೈ. 999 0 0	ರೂ. ಆ. ಪೈ. ಬಾಕಿ ಹರಾಜ್ ತಾರೀಖಿನ ವರಿಗೆ ಆಗುವ ಬಡ್ಡಿ ಸುದ 781 3 10; ನೋಟೀಸ್ ಫಿ 40 0 0; 821 3 10	ಸರ್ 1890ನೇ ಇಸವಿ ಜನವರೀ ತಾರೀಖು 20ರಲ್ಲು ತಾಲ್ಲೂಕ್ಕು ಕಚೇರಿಯಲ್ಲಿ ಅಮಲ್ದಾರ್ರ ರೂಬರೂ.

ಷರಾ.—ಜೋಡಿದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ, ಉಂಟುಮಾಡಲ್ಪಟ್ಟ ಯಾವ ಹಿಡುವಳಿಗಳಿಗಾಗಲಿ, ದೇಣೆಗಳಿಗಾಗಲಿ ಹಕ್ಕುಗಳಿಗಾಗಲಿ ಅಥವಾ ಮತ್ಯಾವ ಸಂಬಂಧಗಳಿಗಾಗಲಿ ಸದರೀ ಹರಾಜು ಒಳಪಟ್ಟಿರುವದಿಲ್ಲ.

ತಾರೀಖು 9ನೇ ಜನವರಿ 1890.

ನಂ. 283.—ಮೆ|| ಜೇ. ಡಬ್ಲ್ಯು. ಸ್ಮೈಟೆಯವರು ಮೈಸೂರು ಟವರ್ನ ಮಾಜಿಸ್ಟ್ರೇಟ ಕೋರ್ಟಿನ ಚಾರ್ಜನ್ನು ಮೆ|| ಬಿ. ತಿರುಮಲಾಚಾರ್, ಬಿ. ಯಲ್. ಯವರಿಗೆ 1889ನೇ ಇಸವಿ ಡಿಶಂಬರ್ 26ನೇ ತಾರೀಖಿನ ಮಧ್ಯಾನ್ಹಾತ್ಪರ ವೊಪ್ಪಿಸಿರುತ್ತಾರೆ.

ನಂ. 284.—ಮೆ|| ಯಫ್. ಬಿ. ಕ್ರಕ್ರ್ ಯವರು ರೈಲವೇ ಮಾಜಿಸ್ಟ್ರೇಟ ಕೋರ್ಟಿನ ಚಾರ್ಜನ್ನ ಮೆ|| ಹೆಚ್. ಹೆಚ್. ಸ್ಪಾರ್ಕ್ಸ ಯವರಿಗೆ, 1890ನೇ ಇಸವಿ ಜನವರಿ 6ನೇ ತಾರೀಖಿನ ಪೂರ್ವಾನ್ಹದಲ್ಲಿ ವೊಪ್ಪಿಸಿರುತ್ತಾರೆ.

ನಂ. 285.—ಮೆ|| ಬಿ. ತಿರುಮಲಾಚಾರ್, ಬಿ. ಯಲ್. ಯವರು ಫ್ರೆಂಚ್‌ರಾಕ್ಸ ಸಬ್ ಡಿವಿಜನ ವ ಟ್ರೆಜರಿ ಚಾರ್ಜನ್ನು ಮೆ|| ಸಿ. ಮಾದಯ್ಯನವರಿಗೆ 1889ನೇ ಇಸವಿ ಡಿಶಂಬರ್ 25ನೇ ತಾರೀಖಿನ ಮಧ್ಯಾನ್ಹಾತ್ಪರ ವೊಪ್ಪಿಸಿರುತ್ತಾರೆ.

ನಂ. 286.—ಹೊಸದುರ್ಗದ ಡಿಸ್ಟ್ರಿಕ್ಟು ಅಮಲ್‌ದಾರ್ ಅಬ್ದುಲ್‌ರಹಿಂ ಷೇಕ್ರಿಯವರಿಗೆ 1889ನೇ ಇಸವಿ ಫೆಬ್ರವರಿ 5ನೇ ಮರ್ರ್ಕಂ 7140—71—200ನೇ ನಂಬರ್ ಪ್ರೊಸಿಡಿಂಗ್ಸಿನಲ್ಲಿ ಫಾಯಿಷ್ ಮಾಡೋಣಾದ ನಿಬಂಧನೆಗಳ 1ನೇ ಕಲಮನುಸರಿಸಿ, 1889ನೇ ಇಸವಿ ಡಿಶಂಬರ್ 23ರ ಲಾಗಾಯತು 6 ದಿವಸಗಳ ಕ್ಯಾಜ್ಯುಯಲ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 287.—ಮೆ|| ಸಿ. ಈ. ಯಂ. ರಸ್ಸೆಲ್‌ಯವರು ಫಾರೆಸ್ಟ್ ಸೂಪರಿಂಟೆಂಡೆಂಟರ ಆಫೀಸಿನ ಚಾರ್ಜನ್ನ ಮೆ|| ಯಸ್. ಯೇ. ಬಾಪೂರಾಯರಿಗೆ 1889ನೇ ಇಸವಿ ಡಿಶಂಬರ್ 14ನೇ ತಾರೀಖಿನ ಪೂರ್ವಾನ್ಹದಲ್ಲಿ ವೊಪ್ಪಿಸಿರುತ್ತಾರೆ.

ತಾರೀಖು 10ನೇ ಜನವರಿ 1890.

ನಂ. 282.—ಗವರ್ನಮೆಂಟ್ ಅಡ್ವೋಕೆಟರಾದ ಮೆ|| ಸಿ. ಮೀನಾಕ್ಷಯ್ಯ ಬ್ಯಾರಿಷ್ಟರ್ ಅಟ್ ಲಾ ಯವರಿಗೆ, 1889ನೇ ಇಸವಿ ನವಂಬರ್ 30ನೇ ಮರ್ರ್ಕಂ A ನಂಬರ್ ಇಸ್ತಿಹಾರ್‌ನಾಮೆಯ ದೆಶೆಯಿಂದ ಕೊಡೋಣಾಗಿದ್ದ ವೊಂದು ತಿಂಗಳಿಗೆ ಜಾಸ್ತಿಯಾಗಿ ಮೂರು ವಾರಗಳ ರಜಾ ಕೊಡಲ್ಪಟ್ಟಿರುತ್ತದೆ.

ತಾರೀಖು 15ನೇ ಜನವರಿ 1890.

ನಂ. 288.—ಮೊಳಕಾಲ್ಮುರು ತಾಲ್ಲೂಕು ಅಮಲ್‌ದಾರ್ ಸಿ. ಕೃಷ್ಣರಾವ್ ಯವರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ಯರಡು ವಾರಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತದೆ.

ನಂ. 289.—ಹಾಸನ ತಾಲ್ಲೂಕು ಅಮಲ್‌ದಾರ್ ಹೆಚ್. ಆರ್. ಶ್ರೀನಿವಾಸರಾಯರು, 1889ನೇ ಇಸವಿ ನವಂಬರ್ 30ನೇ ತಾರೀಖಿನ ಮಧ್ಯಾನ್ಹಾತ್ಪರ ಡಿಟೋ ತಾಲ್ಲೂಕಿನ ಚಾರ್ಜನ್ನ ಶಿರಸ್ತೇದಾರ್ ವೆಂಕಟಕೃಷ್ಣಯ್ಯನವರಿಂದ ಮರಳಿ ವಹಿಸಿಕೊಂಡಿರುತ್ತಾರಾಗಿ 1889ನೇ ಇಸವಿ ಅಕ್ಟೋಬರ್ 13ನೇ ಮರ್ರ್ಕಂ 613ನೇ ನಂಬರುಳ್ಳ ಈ ಆಫೀಸಿನ ಇಸ್ತಿಹಾರಿನಲ್ಲಿ ಕೊಡೋಣಾಗಿದ್ದ ಪ್ರಿವಿಲೀಜ್ ರಜಾ ಪೈಕಿ ಉಪಯೋಗಿಸಿಕೊಳ್ಳದೆ ಬಾಕಿ ಯಿರುವ ರಜಾವನ್ನ ಇದರ ದೆಶೆಯಿಂದ ರದ್ದುಪಡಿಸೋಣಾಗಿರುತ್ತದೆ.

ತಾರೀಖು 17ನೇ ಜನವರಿ 1890.

ನಂ. 293.—ಸ್ನೇ 1889ನೇ ಇಸವಿ ನವಂಬರ್ 21ನೇ ಮರ್ರ್ಕಂ 821ನೇ ನಂಬರುಳ್ಳ ಇಸ್ತಿಹಾರಿನ ದೆಶೆಯಿಂದ ಮೆ|| ಕೆ. ಪಿ. ಪುಟ್ಟಣ್ಣಶೆಟ್ಟಿಯವರಿಗೆ ಕೊಡೋಣಾಗಿದ್ದ ರಜಾವನ್ನೂ ವ ಅವರ ಗೈರ್ ಹಾಜರಿಯಲ್ಲಿ ಮೆ|| ಸೈಯದ್ ಉದ್ದೀನ್ ಹುಸೇನಿಯವರು ಶಿವಮೊಗ್ಗಾ ಡಿಸ್ಟ್ರಿಕ್ಟು ಪೊಲೀಸ್ ಅಸಿಸ್ಟೆಂಟ್ ಕಮ್ಮಿಷನರ ಕೆಲಸ ಆಕ್ಟಿಂಗ್ ತರೀಕ್ ನೋಡುವಂತೆ ಮಾಡಿದ್ದ ಮೊಕರರಾತಿಯನ್ನು ಸಹ ಯಿದರ ದೆಸೆಯಿಂದ ರದ್ದುಪಡಿಸೋಣಾಗಿರುತ್ತೆ.

ತಾರೀಖು ನೇ ಜನವರಿ 1890.

ನಂ. 294.—ಸಕಲ ಜನಗಳಿಗೂ ತಿಳಿಯುವ ಖಬ್ರೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಾದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡ ದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ ಡೆಪ್ಯುಟಿ ಕಮ್ಮಿಷನರವರು ತಮ್ಮ ಮುಖ್ತ್ಯಾರೀ ಮೇರೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ್ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕಿ ಬಾಕಿಯನ್ನು ಹರಾಜ್ ತಾರೀಖು ಲಾಗಾಯತು 15 ದಿನಗಳೊಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತನ್ನ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಭರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮುವುಕೂಫ್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ, ಇರುವ ಗಲ್ಲತ್‌ಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್‌ಪಟ್ಟೆಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಹೋಬಳಿ.	ಗ್ರಾಮ.	ಕಾಯಂಗುತ್ತಾದಾರರ ಹೆಸರು.	ಅಂದಾಜಾ ಬೀಜವರಿ.	ಅಂದಾಜಾ ಹುಟ್ಟುವಳಿ ಯಾ ಬೇರಿಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗ್ಗೈರೆ.
					ಖಂ. ಕೊ. ಪ	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.	
ಕೋಲಾರ.	ಕೋಲಾರ.	ವೇಮಗಲ್.	ಕಾಯಂಗುತ್ತಾ ಬಾಳನಾಗನ ಹಳ್ಳಿ.	ಶೀನಪ್ಪ ಮತ್ತು ವೆಂಕಟಪ್ಪಯ್ಯ	14 13 12	80 9 8	76 0 1 ಲೋಕಲ್‌ಸೆಸ್ ದೇಖಿಲ್.	727 1 1 ಮತ್ತು ಹರಾಜ್ ತಾರೀಖುವರಿಗೆ ಬಡ್ಡಿ	ಸ್ನ 1890ನೇ ಇಸವಿ ಫೆಬ್ರುವರೀ ತಾರೀಖು 18ರಲ್ಲು ತಾಲ್ಲೂಕು ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ಷರಾ.—ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಲಾಗಲಿ ಉಂಟು ಮಾಡಲ್ಪಟ್ಟ ತಮಾಂ ಹಿಡುವಳಿಗಳಿಗೂ ದೇಣಿಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ತ್ಯಾವ ಸಂಬಂಧಗಳಿಗೂ ಸದರೀ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 18ನೇ ಜನವರಿ 1890.

ನಂ. 295.—ಸಕಲ ಜನಗಳಿಗೂ ತಿಳಿಯುವಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಕಾಯಂಗುತ್ತಿಗೆದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಫ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಕಾಯಂಗುತ್ತಾ ಗ್ರಾಮಗಳು ಇದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವವು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಷುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಚಡವರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಒಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಿಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕಿ ಶೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ ಕ್ರಯದ ಮೊಬಲಗ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್‌ಕ್ರಯದಾರನ ಖರ್ಚಿನಲ್ಲಿ ವ ನುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರ್ಫೆ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿ ಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮವುಕೂಫ಼್ ಮಾಡಲ್ಪಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜ್ ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನ ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರೆಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲ್‌ನಲ್ಲಾಗಲಿ ಅಂದಾಜಾ ಬೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್‌ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ನುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂಥಾ ಅಪ್ಪೀಲ್‌ನಲ್ಲಿ ಆಗುವ ಆಖೈರ್ ಹುಕುಮಿಗೆ ಸದರೀ ಕ್ರಯವು ವಳಪಟ್ಟು ಯಿರುತ್ತೆ.

ಡಿಸ್ಟ್ರಿಕ್ಟ್.	ತಾಲ್ಲೂಕು.	ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳೀ ಯಾ ಬೇರೀಜು.	ಸಾಲಿಯಾನಾ ಸರಕಾರಕ್ಕೆ ಕೊಡಬೇಕಾದ ಕ್ವಿಟ್‌ರೆಂಟ್.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
ಕೋಲಾರ.	ಕೋಲಾರ.	ಹುನಗಲ್ಲೆ.	ಕಾಯಂಗುತ್ತಾ ವೀರನಹಳ್ಳಿ.	ಮಹದೇವರಾವ್.	ಖಂ. ಕೊ. ಪ. 12 10 0	ರೂ. ಆ. ಪೈ. 38 1 0	ರೂ. ಆ. ಪೈ. 44 3 9 ಲೋಕಲ್‌ಸೆಸ್ ದೇಖೀಲ್	ರೂ. ಆ. ಪೈ. 239 3 11 ಮತ್ತು ಹರಾಜ್ ತಾರೀಖು ವರಿಗೆ ಬಡ್ಡಿ	1890ನೇ ಇಸವಿ ಫಿಬ್ರವರಿ ತಾರೀಖು 18ರಲ್ಲು ತಾಲ್ಲೂಕ್‌ಕಚೇರಿಯಲ್ಲಿ ಅಮಲ್‌ದಾರ್ರ ರೂಬರೂ.

ಷರಾ.—ಕಾಯಂಗುತ್ತಾದಾರರುಗಳಿಂದಲಾಗಲಿ, ಬಾಧ್ಯತೆಯ ಮೂಲಕ ಯಿವರುಗಳಿಗೆ ಹಿಂದೆ ಯಿದ್ದವರಿಂದಾಗಲಿ ಉಂಟುಮಾಡಲ್ಪಟ್ಟತವಾಂ ಹಿಡುವಳಿಗಳಿಗೂ ದೇಣೆಗಳಿಗೂ ಮತ್ತು ಹಕ್ಕುಗಳಿಗೂ ಅಥವಾ ಮತ್ಯಾವ ಸಂಬಂಧಗಳಿಗೂ ಸದರಿ ಹರಾಜು ವಳಪಟ್ಟಿರುವದಿಲ್ಲ.

ತಾರೀಖು 25ನೇ ಜನವರೀ 1890.

ಮೈಸೂರು ಡಿಸ್ಟ್ರಿಕ್ಟಿಗೆ ಶೇರಿದ ಯಿದರಡೀ ಕಂಡ ತಾಲ್ಲೂಕುಗಳಲ್ಲಿ, 1890ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1892ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ ಎರಡು ವರುಷಗಳ ಕಾಲ ಪರಿಯಂತ ಶೇಂದೀ ಬಿಕ್ರೀ ಮಾಡುವ ಪಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟವೆ:—

1 ಮೈಸೂರು ತಾಲ್ಲೂಕು
2 ಶ್ರೀರಂಗಪಟ್ಣ ತಾಲ್ಲೂಕು
3 ತಿರುಮುಕೂಡ್ಲು ನರಸೀಪುರ ತಾಲ್ಲೂಕು
4 ಮಂಡ್ಯ ತಾಲ್ಲೂಕು
5 ಯಡತೊರೆ ತಾಲ್ಲೂಕು
6 ಹುಣಸೂರು ತಾಲ್ಲೂಕು
7 ಹೆಗ್ಗಡದೇವನಕೋಟೆ ತಾಲ್ಲೂಕು
8 ಚಾಮರಾಜನಗರ ತಾಲ್ಲೂಕು
9 ಗುಂಡ್ಲು ಪ್ಯಾಟೆ ತಾಲ್ಲೂಕು
10 ನಂಜನಗೂಡು ತಾಲ್ಲೂಕು
11 ಅತ್ತಿಕುಪ್ಪಾ ತಾಲ್ಲೂಕು
12 ನಾಗಮಂಗಲ ತಾಲ್ಲೂಕು
13 ಮಳವಳ್ಳಿ ತಾಲ್ಲೂಕು
14 ಯಳಂದೂರು ತಾಲ್ಲೂಕು

2. ಪ್ರತಿ ದರಖಾಸ್ತೂ, ದರಖಾಸ್ತುದಾರನ ಯಿಚ್ಛಾನುಸಾರ ಮೇಲೆ ಕಂಡ ಯಲ್ಲಾ ತಾಲ್ಲೂಕುಗಳಿಗಾಗಲೀ, ಯಾವದಾದರೂ ಒಂದು ಯಾ ಹೆಚ್ಚು ತಾಲ್ಲೂಕುಗಳಿಗಾಗಲೀ ಕಳುಹಿಸಲ್ಪಡಬಹುದು.

3. ಪ್ರತಿ ದರಖಾಸ್ತಿನಲ್ಲಿಯೂ, ಸದರೀ ದರಖಾಸ್ತು ಯಾವದಕ್ಕಾಗಿ ಕಳುಹಿಸಲ್ಪಡುತ್ತೊ ಅಂಥಾ ತಾಲ್ಲೂಕು ಯಾ ತಾಲ್ಲೂಕುಗಳ ಹೆಸರನ್ನೂ ನಮೂದಿಸಿರತಕ್ಕದ್ದಲ್ಲದೆ ಪ್ರತಿ ಒಂದು ತಾಲ್ಲೂಕಿಗೂ ಸಾಲಿಯಾನಾ ಕೊಡುವದಾಗಿ ಒಪ್ಪುವ ಮೊಬಲಗನ್ನೂ ನಮೂದಿಸತಕ್ಕದ್ದು. ಮತ್ತು ದರಖಾಸ್ತು ಮಾಡುವಂಥಾ ತಾಲ್ಲೂಕು ಒಂದಕ್ಕೆ ಒಂದು ನೂರು ರೂಪಾಯಿಗಳ ಪ್ರಕಾರ ಆಗುವ ಠೇವಣಿ ಮೊಬಲಗು ದರಖಾಸ್ತಿನೊಡನೆ ಕಳುಹಿಸತಕ್ಕದ್ದು. ಠೇವಣಿ ಮೊಬಲಗು ನಗದಾಗಿಯಾಗಲಿ, ಕ್ರಮವಾಗಿ ಮೈಸೂರು ದಿವಾನರವರ ಹೆಸರಿಗೆ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಕಳುಹಿಸತಕ್ಕದ್ದು.

4. ಪ್ರತಿ ದರಖಾಸ್ತೂ ಮೊಹರ್ ಮಾಡಲ್ಪಟ್ಟು ಲಖೋಟೆಗಳಿಗೆ ಹಾಕಲ್ಪಟ್ಟು "1890ನೇ ಇಸವಿ ಲಾಗಾಯತು ಎರಡು ವರುಷಗಳ ಪರಿಯಂತ ಶೇಂದಿ ಬಿಕ್ರೀ ಮಾಡುವ ಪಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

5. ದರಖಾಸ್ತುಗಳು, ಸರ್ 1890ನೇ ಇಸವಿ ಫೆಬ್ರುವರೀ 24ನೇ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು, ಯಕ್ಸೈಸ್ ಕಮ್ಮಿಷನರವರ ದ್ವಾರಾ ದಿವಾನರವರಿಗೆ ಸಿಫಾರಸ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರವರು ಚುನಾಯಿಸುತ್ತಾರೋ ಅಂಥಾ ದರಖಾಸ್ತುದಾರನು ಕೂಡಲೆ ನಗದಾಗಿಯಾಗಲಿ, ಕ್ರಮಪ್ರಕಾರ ಮೈಸೂರು ದಿವಾನರವರ ಹೆಸರಿಗೆ ಇಂಡಾರಸು ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದು ಭಾಗವಾಗಲಿ (ಅಥವಾ ಒಂದು ತಿಂಗಳ ಬಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

6. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂಥಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಚಡದ ರಖಾಸ್ತನ್ನಾಗಲೀ, ಯಾವ ದರಖಾಸ್ತನ್ನಾಗಲೀ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಯಂಟು ದಿನಗಳೊಳಗಾಗಿ 3 ವ 5ನೇ ಕಲಂ ಅನುಸರಿಸಿ, ಮೊದಲೇ ಡಿಪಾಜಿಟ ಯಿಟ್ಟಿರುವ ಮೊಬಲಗ ದೇಖಿಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗ ಪೈಕೀ ನಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮ ಪ್ರಕಾರ ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರವರಲ್ಲಿ ಡಿಪಾಜಿಟ ಇಡತಕ್ಕದ್ದು. ಮತ್ತು ಯಿದರಲ್ಲಿ ಮುಂದೆ ನಮೂದಾಗುವ ಷರತ್ತುಗಳಿಗನುಸರಿಸಿ ನಡೆದುಕೊಳ್ಳಲಿಕ್ಕೆ ಬದ್ಧನಾಗಿರುತ್ತೇನೆಂದು ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದ ಮೇಲೆ ವೊಂದು ಕರಾರು ಬರದುಕೊಡತಕ್ಕದ್ದು. ಆತನು ಕರಾರಿಗೆ ರುಜುಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಯಿಜಾರೆಯು ದರಖಾಸ್ತುದಾರನ ಲುಕ್ಸಾನಿಗೆ ವಳಪಟ್ಟು ಅನ್ಯಥಾ ಏಲೀ ಮಾಡಲ್ಪಡುವದು.

ಷ ರ ತ್ತು ಗ ಳು.

I. ಸಾಲಿಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ ವಿಧಿಸಲ್ಪಟ್ಟ ಲೋಕಲ್‌ಸೆಸ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಬಿಸ್ತುಗಳಪ್ರಕಾರ ಪಾವತೀ ಮಾಡಲ್ಪಡ

ತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ ಶೇಕಡಾ ಸಾಲಿಯಾನಾ 6ರ ಪ್ರಕಾರ ಬಡ್ಡೀ ಕೊಡಲ್ಪಡತಕ್ಕದ್ದು. ಅಂಥಾ ಬಾಕೀ ಮೊಬಲಗಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೇ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲಿ ಜಾರೀ ಇರುವ ರೂಲ್ಸನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು, ಮತ್ತು ಯಕ್ಸೈಸ್ ಕಮ್ಮಿಷನರವರ ದ್ವಾರಾ ದಿವಾನರವರ ಮಂಜೂರಾತಿಯನ್ನು ಪಡೆದ ತರುವಾಯ ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಯಿತರ ವಿಧವಾಗಿ ವಿಲೆ ಮಾಡುವದರಿಂದಾಗಲಿ ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

II. ಚಿಲ್ಲರೆ ಪುರೋಖ್ತುದಾರರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ ಇಜಾರೆದಾರನು ಹಾಲೀ ಶೇಂದಿ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೆ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯವಿಷಯದಲ್ಲಾಗಲಿ, ಯಾವ ಬದಲಾಣಿಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆಬಗ್ಯಾಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ ತೆಗದುಕೊಳ್ಳಕೂಡದು.

IV. ಇಜಾರೇದಾರನು ಮೈಸೂರು ಗವರ್ನಮೆಂಟನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟ ವಿವರಿಸಲ್ಪಟ್ಟಿರುವಂತೆ ತಮ್ಮ ಗ್ರಾಮಗಳ ಸರಹದ್ದುಗಳೊಳಗೆ ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯುಂಗುತ್ತಾ ಗ್ರಾಮಗಳ ಹಿಡುವಳಿದಾರರ ಹಕ್ಕುದಾರಿಗಳನ್ನು ಶೇಂದಿ ಹುಟ್ಟುವಳಿ ವಿಷಯದಲ್ಲಿ ಗುತ್ತಿಗೇದಾರನು ಚಲಾಯಿಸುವದಕ್ಕೆ ಪೂರ್ತಿಯಾಗಿ ಸ್ವತಂತ್ರನಾಗಿರುತ್ತಾನೆ. ಅಂತಾ ಇನಾಂದಾರರುಗಳ ಶೇಂದಿ ಹಕ್ಕುದಾರಿಗಳನ್ನು ಇಜಾರೆದಾರನು ಚಲಾಯಿಸಿದಾಗ್ಯೂ ಸರಿಯೆ ಅಥವಾ ಇಲ್ಲದಿದ್ದರೂ ಸರಿಯೆ ಮೇಲ್ಕಂಡ ಇನಾಂದಾರರುಗಳಿಗೆ ಸಲ್ಲಬೇಕಾದ ಶೇಂದಿ ಹುಟ್ಟುವಳಿಯು ಇಜಾರೆದಾರನಿಂದ ಪಾವತಿ ಮಾಡಲ್ಪಡತಕ್ಕದ್ದು, ಮತ್ತು ಅಂತಾ ಮೊಬಲಗಿನ ವಿಷಯದಲ್ಲಿ ಇಜಾರೆದಾರರಿಗೂ ಇನಾಂದಾರರಿಗೂ ಯಾವದಾದರೂ ವಿಶೇಷ ಒಡಂಬಡಿಕೆ ಇಲ್ಲದ ಪಕ್ಷದಲ್ಲಿ ಜಾರಿಯಲ್ಲಿ ಇರತಕ್ಕ ರೂಲ್ಸ ಅನುಸರಿಸಿ ಗೊತ್ತು ಮಾಡಲ್ಪಡತಕ್ಕದ್ದು, ಮತ್ತು ಅಂತಾ ರೂಲ್ಸ ಇಲ್ಲದ ಪಕ್ಷಕ್ಕೆ ಮಾಮೂಲ್ ಅನುಸರಿಸಿ ಗೊತ್ತು ಮಾಡಲ್ಪಡತಕ್ಕದ್ದು. ಶೇಂದಿ ಹುಟ್ಟುವಳಿಗಾಗಿ ಇನಾಂದಾರರ ಹಕ್ಕುದಾರಿ ಕುರಿತು ಆಗಲಿ ಅಥವಾ ಇಜಾರೆದಾರನಿಂದ ಇನಾಂದಾರರಿಗೆ ಸಲ್ಲಬೇಕಾದ ಶೇಂದಿ ಹುಟ್ಟುವಳಿ ಮೊಬಲಗಿನ ವಿಷಯದಲ್ಲಾಗಲಿ ಇನಾಂದಾರರಿಗೂ ಇಜಾರೆದಾರನಿಗೂ ತಕರಾರ್ ಸಂಭವಿಸಿದರೆ ಅಂತಾ ತಕರಾರು ಕುರಿತು ಇಜಾರೆದಾರನಿಂದಲಾಗಲಿ ಇನಾಮುದಾರನಿಂದಾಗಲಿ ಫಿರ್ಯಾದು ಬಂದ ತರುವಾಯ ಡೆಪ್ಯುಟಿ ಕಮ್ಮಿಷನರವರು ಸದರೀ ತಕರಾರನ್ನು ಯುಕ್ತಾನುಸಾರ ನ್ಯಾಯವಿದ್ದಂತೆ ಫೈಸಲ್ಮಾಡತಕ್ಕದ್ದು. ಮತ್ತು ಅಂತಾ ಫೈಸಲಿಗೆ ಇಜಾರೆದಾರನು ಬದ್ಧನಾಗಿರತಕ್ಕದ್ದು. ಪರಂತು ಸದರೀ ಫೈಸಲ್ ಅಪೀಲಿನಲ್ಲಿ ಗವರ್ನಮೆಂಟನಿಂದ ಕಾಯಂಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗಿ ಇರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂತಾ ಫೈಸಲಾತಿಯಲ್ಲಾಗಲಿ ಅಥವಾ ಗವರ್ನಮೆಂಟನಿಂದ ಅಪೀಲಿನಲ್ಲಿ ಆಗಲಿ ಪಾವತಿ ಮಾಡಲ್ಪಡಬೇಕೆಂತ ಹುಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕಿ ವಸೂಲಿ ಬಗ್ಯಾಗಿ ತತ್ಕಾಲದಲ್ಲಿ ಜಾರಿಯಲ್ಲಿ ಇರತಕ್ಕ ರೂಲ್ಸ ಅನುಸರಿಸಿ ಇಜಾರೆದಾರನಿಂದ ವಸೂಲ್ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕುಂ ಮಾಡಲ್ಪಟ್ಟ ಹೊರತು ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VI. ಯೂರೋಪಿಯನ್ ಸೋಲ್ಜರುಗಳ ಒಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚಲ್ಪಡುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತ್ತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೆ ಅಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯ್ಯವಾಗಿ ಇರತಕ್ಕದ್ದು.

VIII. ಇಜಾರೆದಾರನು ಸರಕಾರದ ಬಂಜರ್ ಜಮೀನನಲ್ಲಿ ಇರುವ ಈಚಲು ಮರಗಳನ್ನು ಇಜಾರೇಗಳ ಸ್ಥಳ ಸರಹದ್ದಿನೊಳಗೆ ಫುರೋಖ್ತು ಬಗ್ಯಾಗಲಿ ಬೆಲ್ಲ ತಯಾರ್ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು. ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸ

ಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ತಾಲ್ಲೂಕುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ ನ ಷರತುಗಳ ಪ್ರಕಾರವೂ ಮಾತ್ರವೇ ಪಲ್ಲ ತಯಾರ್ಮಾಡಲ್ಪಡತಕ್ಕದ್ದು.

IX. ಯಿಜಾರೇದಾರನು, ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್‌ವಾಕಾ ಲೆಖ್ಖಗಳು ಇಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಯಿಳಿಸಲ್ಪಟ್ಟ ಶೇಂದಿ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದಿ ಕಟ್ಟಿದ ಮರಗಳ ಸಂಖ್ಯೆ, (3) ರೋಜಿನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದು, (4) ರೋಜಿನಾ ಬಿಕರೀಮಾಡಲ್ಪಟ್ಟ ಶೇಂದಿಯ ತೇದಾದು ಮತ್ತು (5) ಶೇಂದಿಯು ಸರಬರಾಯಿ ಮಾಡಲ್ಪಟ್ಟ ದುರ್ಕಾನುಗಳ ಹೆಸರು ಈ ಬಾಬತು ತಪಶೀಲ್‌ಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್‌ದಾರರಿಂದಾಗಲೀ ಯಾ ಆಬಗ್ಯಾಗಿ ಡೆಪ್ಯುಟಿ ಕಮ್ಮಿಷ್ನರವರಿಂದ ಮೊಕರರ್ ಮಾಡಲ್ಪಟ್ಟ ಯಿತರ ಯಾವ ಆಫಿಸರರಿಂದಾಗಲಿ ತನಿಖೆ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಯಿರತಕ್ಕವು; ಮತ್ತು ಯಿವುಗಳ ನಕ್ಕಲು ಡೆಪ್ಯುಟಿ ಕಮ್ಮಿಷ್ನರವರಿಂದಾಗಲೀ ಅಮಲ್‌ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಗವರ್ನಮೇಂಟಿನವರಿಂದ ವಿಧಿಸಲ್ಪಡುವಂತಾ ನಮೂನೆಯಲ್ಲಿ ಯಿಜಾರೆದಾರನಿಂದ ಹಾಜರ್ ಮಾಡಲ್ಪಡತಕ್ಕದ್ದು.

X. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡಿಗೆ ಬಾಧ್ಯತೆ ಉಳ್ಳವನಾಗಿರುವದಿಲ್ಲ. ತಾಲ್ಲೂಕಿಗೆ ಶೇರಿದ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳಮೇಲೆ ಇಜಾರೆಯನ್ನು ಮವ್ಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

XI. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೋಪಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವನಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಇಜಾರೆದಾರನು ಯಾ ಬಿಕ್ರೀದಾರನು ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಬಿಕ್ರೀದಾರನ ಲೈಸೆನ್ಸು ರದ್ದಾಗಲಿಕ್ಕೂ, ಗುರಿಯಾಗಿರುತ್ತೆ.

XII. ಇಜಾರೆದಾರನು, ತನ್ನ ನವುಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಯಿಳಿಸದೇಯೂ, ಮತ್ತು ಶೇಂದಿ ಯಿಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳೂ ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಮತ್ತು ಯಾವ ಗಿಡಗಳನ್ನೇ ಆಗಲಿ ಅವು ಸತ್ತುಹೋಗುವಂತೆ ಅಜಾಗ್ರತೆಯಾಗಿ ಕಟ್ಟಕೂಡದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿತಪ್ಪಿತಕ್ಕೂ 100ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗಿರತಕ್ಕದ್ದು

XIII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ, ಮಾರಲ್ಪಡತಕ್ಕದ್ದು—

	ಶೇರುವೆಂದಕ್ಕೆ ಖರೀದಿ.	
	ಜಾಸ್ತಿ.	ಕಮ್ಮಿ.
	ರೂ. ಅ. ಪೈ.	ರೂ. ಅ. ಪೈ.
ಮೈಸೂರು ಷಹರಿನಲ್ಲಿ	0—1—0	0—0—8
ಅತ್ತಿಕುಪ್ಪ ವ ನಾಗಮಂಗಲ ತಾಲ್ಲೂಕುಗಳ ವಿನಾ ಇತರ ತಾಲ್ಲೂಕು ಕಸಬಾಗಳಲ್ಲಿ	0—0—10	0—0—6
ಅತ್ತಿಕುಪ್ಪ ವ ನಾಗಮಂಗಲದ ಕಸಬಾಗಳಲ್ಲಿ	0—1—0	0—0—6
ಗಾಡೆಗಾನೆಗಳಲ್ಲಿ	0—0—6	0—0—4

8. ಶೇಂದಿ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

9. ಸರ್ 1886—87ನೇ ಇಸವಿ ಲಾಗಾಯತು ಸಾಲಿಯಾನಾ ಶೇಂದಿ ಹುಟ್ಟುವಳಿಯು ಇದರಡೀ ನಮೂದಿಸಲ್ಪಟ್ಟಿರುತ್ತೆ, ಇತರ ಯಾವದಾದರೂ ವಿಷಯಗಳನ್ನೂ ಕುರಿತ ಸಂಗತಿಯನ್ನು, ಡೆಪ್ಯುಟಿ ಕಮ್ಮಿಷನರವರ ಆಫಿಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

		ರೂ.			ರೂ.
1886—87	..	2,25,000	1888—89	..	2,68,000
1887—88	..	2,68,000	1889—90	..	2,68,000

ಕೋಲಾರ ಡಿಸ್ಟ್ರಿಕ್ಟು.

ಕೋಲಾರ ಡಿಸ್ಟ್ರಿಕ್ಟಿನ ಇದರಡೀ ಕಂಡ ತಾಲ್ಲೂಕುಗಳಲ್ಲಿ ಸ೯1890ನೇ ಇಸವಿ ಏಪ್ರೆಲ್ 1ನೇ ತಾರೀಖು ಲಾಗಾಯತು 1892ನೇ ಇಸವಿ ಮಾರ್ಚಿ 31ನೇ ತಾರೀಖುವರಿಗೆ ಆಗುವ 2 ವರುಷಗಳ ಕಾಲದ ಪರ್ಯಂತ ಶೇಂದಿ ಬಿಕರೀಮಾಡುವ ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಮಾಡಬಹುದೆಂದು ಇದರಿಂದ ಕೋರಲ್ಪಟ್ಟಿರುತ್ತೆ.

1. ಕೋಲಾರ.	4. ಮುಳಬಾಗಲ್.	7. ಬಾಗೇಪಲ್ಲೀ (ಗುಡಿಬಂಡೆ ಡೆಪ್ಯುಟಿ ಅಮಲ್‌ದಾರ್ರ ಚಾರ್ಜ ದೇಖೀಲ್.)
2. ಬೌರಿಂಗ್ ಪೇಟೆ.	5. ಸಿಡ್ಲಘಟ್ಟ.	8. ಗೋರೀಬಿದನೂರು.
3. ಚಿಂತಾಮಣಿ (ಶ್ರೀನಿವಾಸಪುರ ಡೆ॥ ಅಮಲ್‌ದಾರ್ರ ಚಾರ್ಜದೇಖೀಲ್.)	6. ಚಿಕ್ಕಬಳ್ಳಾಪುರ.	9. ಮಾಲೂರು.

2. ಪ್ರತಿ ದರಖಾಸ್ತೂ ದರಖಾಸ್ತುದಾರನ ಇಚ್ಛಾನುಸಾರ ಮೇಲ್ಕಂಡ ತಮಾಂ ತಾಲ್ಲೂಕುಗಳಿಗಾಗಲಿ ಅಥವಾ ಸದರೀ ತಾಲ್ಲೂಕಗಳ ಪೈಕೀ ಒಂದು ಯಾ ಹೆಚ್ಚು ತಾಲ್ಲೂಕುಗಳಿಗಾಗಲಿ ಕಳುಹಿಸಲ್ಪಡಬಹುದು.

3. ಪ್ರತಿ ದರಖಾಸ್ತಿನಲ್ಲಿಯೂ ದರಖಾಸ್ತು ಮಾಡಲ್ಪಟ್ಟ ತಾಲ್ಲೂಕು ಯಾ ತಾಲ್ಲೂಕುಗಳ ಹೆಸರು ನಮೂದಿಸಲ್ಪಡಬೇಕಲ್ಲದೆ ಪ್ರತಿತಾಲ್ಲೂಕಿಗೂ ಸಾಲಿಯಾನಾ ಕೊಡುವಂತೆ ಒಪ್ಪುವ ಮೊಬಲಗು ನಮೂದಿಸಲ್ಪಟ್ಟು ದರಖಾಸ್ತು ಮಾಡಲ್ಪಟ್ಟ ತಾಲ್ಲೂಕು ಒಂದಕ್ಕೆ 100 ರೂಪಾಯಿ ಪ್ರಕಾರ ಆಗುವ ಠೇವಣೀ ಮೊಬಲಗು ಸಹಿತ ಅಡಗಿರತಕ್ಕದ್ದು. ಠೇವಣೀ ಮೊಬಲಗು ನಗದಾಗಿಯಾಗಲಿ, ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ ಕಳುಹಿಸಲ್ಪಡತಕ್ಕದ್ದು.

4. ಪ್ರತಿ ದರಖಾಸ್ತೂ ಮೊಹರ್ಮಾಡಲ್ಪಟ್ಟ ಲಕ್ಕೋಟೆಯಲ್ಲಿ ಹಾಕಲ್ಪಟ್ಟು "1890ನೇ ಇಸವೀ ಲಾಗಾಯತು ಎರಡು ವರುಷಗಳಕಾಲ ಪರ್ಯಂತ ಶೇಂದೀ ಬಿಕರೀ ಮಾಡುವ ಬಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಎಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

5. ದರಖಾಸ್ತುಗಳು, ಸ೯ 1890ನೇ ಇಸವಿ ಫೆಬ್ರವರಿ 28ನೇ ಮರ್ಕುಮಿನ ಮಧ್ಯಾನ್ಹದ ಒಳಗಾಗಿಯಾಗಲಿ, ತತ್ಪೂರ್ವವಾಗಲಿ, ಕೋಲಾರ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು ಯಕ್ಸೈಜ್ ಕಮ್ಮಿಷನರವರ ಮೂಲಕ ದಿವಾನರವರಿಗೆ ಶಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂತಾ ದರಖಾಸ್ತುದಾರನು ಕೂಡ್ಲೇ ನಗದಾಗಿಯಾಗಲಿ, ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಕ್ರಮವಾಗಿ ಯಿಂಡಾರ್ಸಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ಒಂದು ಭಾಗವಾಗಲಿ (ಅಥವಾ ಒಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತೀಯಾಗಿ ಡಿಪಾಜಿಟ ಇಡತಕ್ಕದ್ದು. ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟಗಳು ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಚಡ ದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ, 3 ವ 5ನೇ ಕಲಂಗಳನುಸರಿಸಿ ಮೊದಲು ಡಿಪಾಜಿಟಿ ಇಟ್ಟಿರುವ ಮೊಬಲಗ್ ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲಿ, ಕ್ರಮಪ್ರಕಾರ ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ ಇಡತಕ್ಕದ್ದು, ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತಗಳಿಗೆ ಬದ್ಧರಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಒಂದು ಕರಾರ್ ಬರೆದುಕೊಡತಕ್ಕದ್ದು; ಆತನು ಕರಾರಿಗೆ ರುಜು ಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ ಇಡಲಿಕ್ಕಾಗಲಿ ತಪ್ಪಿದರೆ ಯಾ ನಿರಾಕರಿಸಿದರೆ ಪೂರ್ವವೇ ಇಡಲ್ಪಟ್ಟ ಡಿಪಾಜಿಟಗಳು ಗವರ್ನಮೆಂಟಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ತಪ್ಪಿಹೋದ ದರಖಾಸ್ತುದಾರನ ಲುಕ್ಸಾನಿಗೆ ಒಳಪಟ್ಟು ಅನ್ಯಥಾ ವಿಲೆ ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ ವಿಧಿಸಲ್ಪಟ್ಟ ಲೋಕಲ್ ಸೆಸ್ ದೇಖೀಲ್ ಅಂತಾ ಇಜಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ಅದಕ್ಕೆ ಮುಂದಾಗಿಯಾಗಲಿ ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ ಶೇಕಡಾ ಸಾಲಿಯಾನಾ 6ರ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀಮೊಬಲಗಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು

ದಾರನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು, ಮತ್ತು ಯಕ್ಸೈಜ್‌ಕಮ್ಮಿಷನರವರ ಮೂಲಕ ದಿವಾರ್ನರವರಮಂಜೂರಾತಿಯನ್ನು ಪಡೆದು, ಇಜಾರೆ ರದ್ದಾಗಿರುತ್ತೆಂದು, ತಿಳಿಸುವದಕ್ಕೂ ಅದನ್ನು ಮರಳಿ ಹರಾಜ್ ಹಾಕುವದಕ್ಕೂ ಯಾ ಅಮಾನಿ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೆಖೀಲಿ ತಮಾಂ ಬಾಕೀಗಳನ್ನೂ ಹಾಗೆಇಜಾರೇ ಪುನಶ್ಚ ಹರಾಜ್ ಹಾಕುವದರಿಂದಾಗಲಿ, ಇತರ ವಿಲಾ ಮಾಡುವದರಿಂದಾಗಲಿ ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನ್ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿ ಇರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದಿ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಆವಶ್ಯಕತೆಯ ಸಬಬುಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ, ಮತ್ತು ಇಜಾರೇದಾರನು ಆ ಬಗ್ಯಾಗಿ ಯಾವ ಈಡು ಮೊಬಲಗನ್ನೂ ಕೇಳಕೂಡದು.

III. ಶೇಂದಿಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ವಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು ವೈಸೂರು ಗವರ್ನಮೆಂಟನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವಜಾಸ್ತೀ ರೂಲ್ಸಿಗಾಗಲಿ ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟುವಿವರಿಸಲ್ಪಟ್ಟಿರುವಂತೆ ತಮ್ಮ ಗ್ರಾಮಗಳ ಸರಹದ್ದುಗಳೊಳಗೆ ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರೀಗಳನ್ನು ಇಜಾರೇದಾರನು ಉಂಟಾಗಿದ್ದು ಅವುಗಳನ್ನು ಶೇಂದೀ ಹುಟ್ಟುವಳಿ ಹಕ್ಕುದಾರಿ ವಿಷಯದಲ್ಲಿ ಚಲಾಯಿಸುವ ಬಗ್ಯೆ ಪೂರಾ ಸ್ವಾತಂತ್ರ್ಯವನ್ನು ಉಂಟಾಗಿರತಕ್ಕದ್ದು. ಮೇಲ್ಕಂಡ ಇನಾಂದಾರರುಗಳಿಗೆ ಸಲ್ಲಬೇಕಾದ ಶೇಂದೀ ಹುಟ್ಟುವಳಿಯು, ಇಜಾರೇದಾರನು ಅಂತಾ ಇನಾಂದಾರರುಗಳ ಶೇಂದೀ ಹಕ್ಕುದಾರಿಗಳನ್ನು ಚಲಾಯಿಸಿದಾಗ್ಯೂ ಸರಿಯೆ ಅಥವಾ ಇಲ್ಲದಿದ್ದರೂ ಸರಿಯೆ ಇಜಾರದಾರನಿಂದ ಪಾವತೀಮಾಡಲ್ಪಡತಕದ್ದು. ಮತ್ತು ಅಂಥಾ ಮೊಬಲಗಿಗಾಗಿ ಇನಾಂದಾರರಿಗೂ ಇಜಾರೆದಾರರಿಗೂ ವಿಶೇಷ ಒಡಂಬಡಿಕೆ ಯಾವದೂ ಇಲ್ಲದ ಪಕ್ಷಕ್ಕೆ ಜಾರಿಯಲ್ಲಿರತಕ್ಕ ರೂಲ್ಸ್ ಅನುಸರಿಸಿ ಮೊಬಲಗು ಗೊತ್ತುಮಾಡಲ್ಪಡತಕ್ಕದ್ದು. ಮತ್ತು ಅಂಥಾ ರೂಲ್ಸ್ ಯಾವದೂ ಇಲ್ಲದ ಪಕ್ಷಕ್ಕೆ ಮಾಮೂಲ್ ಅನುಸರಿಸಿ ಗೊತ್ತುಮಾಡಲ್ಪಡತಕ್ಕದ್ದು. ಶೇಂದಿ ಹುಟ್ಟುವಳಿ ಬಗ್ಯೆ ಇನಾಂದಾರರ ಹಕ್ಕುದಾರೀ ವಿಷಯದಲ್ಲಾಗಲಿ, ಅಥವಾ ಇನಾಂದಾರರಿಗೆ ಇಜಾರೇದಾರನಿಂದ ಸಲ್ಲಬೇಕಾದ ಶೇಂದಿ ಹುಟ್ಟುವಳಿ ಮೊಬಲಗಿನ ಮೊತ್ತದ ವಿಷಯದಲ್ಲಾಗಲಿ, ಇನಾಂದಾರರಿಗೂ, ಇಜಾರೇದಾರರಿಗೂ, ತಕರಾರು ಸಂಭವಿಸಿದರೆ, ಅಂಥಾ ತಕರಾರು ಕುರಿತು ಆ ಉಭಯತ್ರರ ಪೈಕೀ ಯಾರಿಂದಾಗಲಿ ಫಿರ್ಯಾದು ಬಂದಮೇಲೆ, ಡೆಪ್ಯುಟಿ ಕಮ್ಮಿಷನರವರು ನ್ಯಾಯ್ಯವಾಗಿಯೂ ಮತ್ತುಯುಕ್ತವಾಗಿಯೂ ಫೈಸಲ್‌ಮಾಡತಕ್ಕದ್ದು. ಮತ್ತು ಯಿಜಾರೇದಾರನುಅಂಥಾ ಫೈಸಲಿಗೆ ಬದ್ಧನಾಗಿರತಕ್ಕದ್ದು,ಪರಂತು ಸದರೀ ಫೈಸಲ್‌ಅಪ್ಪೀಲ್‌ನಲ್ಲಿ ಗವರ್ನಮೆಂಟನಿಂದ ಕಾಯಂಮಾಡಲ್ಪಡಲಿಕ್ಕಾಗಲಿ,ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಅಂಥಾಫೈಸಲಾತಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಅಥವಾ ಅಪ್ಪೀಲಿನಲ್ಲಿ ಗವರ್ನಮೆಂಟನಿಂದ ಸಲಾಯಿಸಲ್ಪಡಬೇಕೆಂತ ಹುಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದಬಾಕೀ ವಸೂಲೀಬಗ್ಯೆ ತತ್ಕಾಲದಲ್ಲಿ ಜಾರೀ ಯಿರತಕ್ಕ ರೂಲ್ಸ್‌ಅನುಸರಿಸಿ ಯಿಜಾರೇದಾರನಿಂದ ವಸೂಲ್ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದೀ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ, ಶೇಂದೀ ಪುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು. ಅಂಥಾ ಫೌಜಿನವರು ತಮ್ಮಕಡೇ ಅಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯ್ಯವಾಗಿ ಇರತಕ್ಕದ್ದು.

VIII. ಇಜಾರೇದಾರನು ಸರಕಾರದ ಬಂಜರ್ ಜಮೀನ್‌ನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಬಿಕರೀ ಬಗ್ಯಾಗಲಿ, ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ, ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು. ಪರಂತು ಸಾಗುವಳಿಗೋಸ್ಕರವಾಗಲಿ ಇತರ

ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ತಾಲ್ಲೂಕುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ; ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತ್‌ಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

IX. ಇಜಾರೇದಾರರು, ಪ್ರತಿ ತಾಲ್ಲೂಕಿಗೂ ಸೂಚಕ ಮತ್ತು ಕರಾರ್ವಾಕಾ ಲೆಕ್ಕಗಳು ಇಡತಕ್ಕದ್ದು; ಅವುಗಳಲ್ಲಿ (1)ಶೇಂದೀ ಇಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರು ವ ಅವುಗಳಿರತಕ್ಕ ಸ್ಥಳ, (2)ಶೇಂದೀ ಕಟ್ಟಿದ ಮರಗಳ ಸಂಖ್ಯೆ, (3)ರೋಜೀನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದು, (4)ರೋಜೀನಾ ಬಿಕರಿಮಾಡಲ್ಪಟ್ಟ ಶೇಂದಿಯ ತೇದಾದು, ಮತ್ತು (5)ಶೇಂದಿಯು ಸರಬರಾಯಿ ಮಾಡಲ್ಪಟ್ಟ ದುಕಾನಗಳ ಹೆಸರು ಈ ಬಾಬತು ತಪಶೀಲ್‌ಗಳು ತೋರಿಸತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್‌ದಾರರಿಂದಾಗಲಿ ಯಾ ಆ ಬಗ್ಯಾಗಿ ಡೆಪ್ಯುಟಿ ಕಮ್ಮಿಷನರವರಿಂದ ಮೊಕರರ್‌ಮಾಡಲ್ಪಟ್ಟ ಇತರ ಯಾವ ಆಫೀಸರರಿಂದಾಗಲಿ ತನಿಖೇ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವು, ಮತ್ತು ಇವುಗಳ ನಕಲು ಡೆಪ್ಯುಟಿ ಕಮ್ಮಿಷನರಿಂದಾಗಲಿ ಅಮಲ್‌ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಗವರ್ನ್‌ಮೆಂಟಿನಿಂದ ವಿಧಿಸಲ್ಪಡುವ ನಮೂನೆಯಲ್ಲಿ ಇಜಾರೇದಾರನಿಂದ ಹಾಜರ್ಮಾಡಲ್ಪಡತಕ್ಕದ್ದು.

X. ಬಿಯರ್ ಸಾರಾಯಿ ವಿಷಯದಲ್ಲಾಗಲಿ, ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನ್‌ಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಒಂದು ತಾಲ್ಲೂಕು ಪೈಕೀ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೇಯನ್ನು ಮೌಕೂಫ್‌ಮಾಡಿ ಆ ಬಗ್ಯೆ ನ್ಯಾಯ್ಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

XI. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯುರೋಪಿಯನ್ ಯಾ ಯುರೋಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಬಬ್ಬ ಸಿಪಾಯಿಗಾಗಲಿ, ಪೋಲೀಸಿನವನಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್‌ಕಿಲಾಫಾಗಲಿ ನಡೆದಲ್ಲಿ ಅದರಿಂದ ಇಜಾರೇದಾರನು ಯಾ ಬಿಕರೀದಾರನು ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಬಿಕರೀದಾರನ ಲೈಸೆನ್ಸ್ ರದ್ದಾಗಲಿಕ್ಕೂ ಗುರಿಯಾಗಿರತಕ್ಕದ್ದು.

XII. ಇಜಾರೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಯತ್ತರಕ್ಕಿಂತ ಕಡಿಮೆಯಾದ ಬುಡಭಾಗಗಳುಳ್ಳ ಎಳೇ ಈಚಲು ಮರಗಳಿಂದ ಶೇಂದಿ ಇಳಿಸದೇಯೂ ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು, ಮತ್ತು ಯಾವ ಮರಗಳನ್ನಾಗಲಿ ಅವು ಸತ್ತುಹೋಗುವಂತೆ ಅಶ್ರದ್ಧೆಯಾಗಿ ಕಟ್ಟಕೂಡದು. ಈ ನಿಬಂಧನೆಗೆ ಏನಾದರೂ ಬರಕಿಲಾಫ್ ನಡದರೆ ಅದರಿಂದ ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೆದಾರನು ಗುರಿಯಾಗಿರತಕ್ಕದ್ದು.

XIII, ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು :—

	ಶೇರು ಒಂದಕ್ಕೆ ಕ್ರಯ.	
	ಜಾಸ್ತಿ.	ಕಮ್ಮಿ.
	ರೂ. ಆ. ಪೈ,	ರೂ. ಆ. ಪೈ.
ಕೋಲಾರ ಡಿಸ್ಟ್ರಿಕ್ಟಿನ ತಾಲ್ಲೂಕು ಕಸಬೆಗಳಲ್ಲಿ	0—1—3	0—0—10
ಡಿಟೋ ಗಾವ್‌ಗಾನೆಗಳಲ್ಲಿ	0—1—0	0—0—8

8. ಶೇಂದಿ ರವಾನೇ ಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡಿ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

9. ಸನ್ 1881—82ನೇ ಇಸವಿ ಲಾಗಾಯತಿನ ಸಾಲಿಯಾನಾ ಶೇಂದೀ ಹುಟ್ಟುವಳಿಯು ಇದರಡಿ ನಮೂದಿಸಲ್ಪಟ್ಟಿರುತ್ತೆ. ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಯನ್ನು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

	ಸಾಲ್ ವೊಂದಕ್ಕೆ
ಸನ್ 1881—82ನೇ ಇಸವಿಲಾಗಾಯತು 1883—84ರ ವರೆಗಿನ ಮೂರುವರುಷಗಳ ಕಾಲಕ್ಕೆ.	ರೂ. 25,000.
ಸನ್ 1884—85ರ ಲಾಗಾಯತು 1886—87ರ ವರೆಗಿನ ಮೂರು ವರುಷಗಳ ಕಾಲಕ್ಕೆ.	,, 40,750.
ಸನ್ 1887—88ರ ಲಾಗಾಯತು 1889—90ರ ವರೆಗಿನ ಮೂರು ವರುಷಗಳ ಕಾಲಕ್ಕೆ.	,, 57,004.

ತುಮಕೂರು ಡಿಸ್ಟ್ರಿಕ್ಟು.

ತುಮುಕೂರು ಡಿಸ್ಟ್ರಿಕ್ಟಿನಲ್ಲಿ 1890ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1892ನೇ ಇಸವಿ ಮಾರ್ಚ 31ನೇ ತಾರೀಖುವರಿಗೆ ಆಗುವ ಎರಡು ವರುಷಗಳ ಕಾಲದಲ್ಲಿ ಶೇಂದಿಯನ್ನು ಬಿಕರೀಮಾಡುವ ವಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟವೆ. ತುಮುಕೂರು ಡಿಸ್ಟ್ರಿಕ್ಟಿಗೆ, ಇದರಡೀ ಕಂಡ ತಾಲ್ಲೂಕುಗಳು ಶೇರಿ ಇರುತ್ತವೆ.

1 ತುಮುಕೂರು ತಾಲೂಕು
2 ಮದ್ದಗಿರಿ ತಾ|| ಕೊಟಗೆರೆ ಡಿ|| ಅಮಲ್‌ದಾರ್ ಛಾರ್ಜದೇಖಿಲ್
3 ಚಿಕ್ಕನಾಯಕನಹಳ್ಳಿ ,, ಡಿ|| ಅಮಲ್‌ದಾರ್ ಛಾರ್ಜದೇಖಿಲ್
4 ಶೀರಾ ,,
5 ಗುಬ್ಬಿ ತಾಲ್ಲೂಕು
6 ತಿಪಟೂರು ,, ತುರುವೇಕೆರೆ ಡಿ|| ಅಮಲ್‌ದಾರ್ ಛಾರ್ಜ ದೇಖಿಲ್
7 ಪಾವಗಡ ,,
8 ಕುಣಿಗಲ್ ,,

2. ಪ್ರತಿ ದರಖಾಸ್ತು, ದರಖಾಸ್ತದಾರನ ಯಿಷ್ಟಾನುಸಾರ ಮೇಲೆ ನಮೂದಾಗುವ ಎಲ್ಲಾ ತಾಲ್ಲೂಕುಗಳಿಗಾಗಲಿ, ಅಥವಾ ವೊಂದು ಯಾ ಹೆಚ್ಚು ತಾಲ್ಲೂಕುಗಳಿಗಾಗಲಿ ಕಳುಹಿಸಲ್ಪಡಬಹುದು.

3. ಪ್ರತಿ ದರಖಾಸ್ತಿನಲ್ಲೂ ಯಾವ ತಾಲ್ಲೂಕು ಯಾ ತಾಲ್ಲೂಕುಗಳ ಬಗ್ಯಾಗಿ ದರಖಾಸ್ತು ಮಾಡೋಣಾಗುತ್ತದೊ, ಆ ತಾಲ್ಲೂಕು ಯಾ ತಾಲ್ಲೂಕುಗಳ ಹೆಸರುಗಳ ನಮೂದನಿಸಿ ಪ್ರತಿ ತಾಲ್ಲೂಕಿಗಾಗಿ ಕೊಡುವಂತೆ ವೊಪ್ಪುವ ಸಾಲೀಯಾನಾ ಯಿಜಾರೆ ಮೊಬಲಗು ನಮೂದಿಸಬೇಕಾದ್ದಲ್ಲದೆ ದರಖಾಸ್ತು ಮಾಡಲ್ಪಡುವ ಪ್ರತಿ ತಾಲ್ಲೂಕಿಗಾಗಿಯೂ 100 ರೂಪಾಯಿಗಳ ಮೇರಿಗೆ ಠೇವಣಾತಿಯೊಂದಿಗೆ ದರಖಾಸ್ತು ಹಾಜರ್ಮಾಡತಕ್ಕದ್ದು. ಸದರೀ ಠೇವಣಾತಿ ನಗದಾಗಿ ಇರತಕ್ಕದ್ದು ಅಥವಾ ಗವರ್ನಮೆಂಟ್ ಪತ್ರಗಳಾಗಿ ಯಿದ್ದಲ್ಲಿ ಅವುಗಳು ಮೈಸೂರು ದಿವಾನರವರ ಹೆಸರಿನಲ್ಲಿ ಕ್ರಮವಾಗಿ ಯಿಂಡಾರ್ಸ ಮಾಡಲ್ಪಟ್ಟಿರತಕ್ಕದ್ದು.

4. ಪ್ರತಿ ದರಖಾಸ್ತು ಲಿಫಾಫೆ ಒಳಗೆ ಹಾಕಿ ಮೊಹರನಿಕಿ ಬಂದು ಮಾಡಲ್ಪಟ್ಟು,—"ಸರ್ 1890ನೇ ಇಸವಿ ಲಾಗಾಯಿತು 2ಎರಡು ವರುಷಗಳ ಪರಿಯಂತ ಶೇಂದಿಯನ್ನ ಬಿಕರಿ ಮಾಡುವ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂತಾ ಲಿಫಾಫೆ ಮೇಲೆ ಮೇಲುವಿಳಾಸ ಬರಿಯತಕ್ಕದು.

5. ದರಖಾಸ್ತುಗಳು ಸರ್ 1890ನೇ ಇಸವಿ ಮಾರ್ಚಿ 3ನೇ ಮರ್ಕುಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ, ತುಮಕೂರು ಡಿಸ್ಟ್ರಿಕ್ಟ ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರರ ದರಖಾಸ್ತುಗಳನ್ನು ಎಕ್ಸೈಜ್ ಕಮ್ಮಿಷ್ನರವರ ದ್ವಾರಾ ದಿವಾನರವರಿಗೆ ಶಿಫಾರಸುಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿ ಕೊಳ್ಳುತ್ತಾರೋ ಅಂಥಾ ದರಖಾಸ್ತುದಾರರು ಕೂಡ್ಲೆ ನಗದಾಗಿಯಾಗಲಿ ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸು ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಲಿ ದರಖಾಸ್ತುಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ್ ಇಡತಕ್ಕದ್ದು. ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟಗಳು, ಅವರು ಖಾಯಿಷ್‌ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು, ಚಡದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೊ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ, 3ನೇ ವ 5ನೇ ಕಲಂ ಅನುಸರಿಸಿ ಮೊದಲು ಡಿಪಾಜಿಟ್ ಇಟ್ಟಿರುವ ಮೊಬಲಗ್, ದೇಖಿಲ್‌ದರಖಾಸ್ತು ಮಾಡಲ್ಪಟ್ಟ ಸಾಲೀ ಯಾನಾ ಇಜಾರೇ ಮೊಬಲಗು ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿ ಯಾಗಲೀ ಮೈಸೂರು ದಿವಾನರವರ ಹೆಸರಿಗೆ ಕ್ರಮ ಪ್ರಕಾರ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲೀ, ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್‌ಗಳನುಸರಿಸಿ ನಡೆದುಕೊಳ್ಳಲಿಕ್ಕೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಒಂದು ಕರಾರ್ ಬರದುಕೊಡತಕ್ಕದ್ದು. ಆತನು ಕರಾರಿಗೆ ರುಜಾ ಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ ಇಡಲಿಕ್ಕಾಗಲೀ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟಗಳು ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು ಇಜಾರೆಯು ತಪ್ಪಿಹೋದ ದರಖಾಸ್ತುದಾರನ ಲುಕ್ಸಾನಿಗೆ ಒಳಪಟ್ಟು ಅನ್ಯಥಾ ವಿಲೇ ಮಾಡಲ್ಪಡುವದು.

ಷ ರ ತ್ತು ಗ ಳು

I. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್ ಸೆಸ್ ದೆ

43

ಡತಕ್ಕದ್ದು. ಅಂತಾ ಬಾಕೀ ಮೊಬಲಗುಗಳು ಪಾವತೀ ಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜರ್ಮಿ ಕಂದಾಯದ ಬಾಕೀ ವಸೂಲೀಗೋಸ್ಕರ ಹಾಲೀ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಯಕ್ಸೈಜ್ ಕಮ್ಮಿಷನರವರ ಮೂಲಕ ದಿರ್ವಾಣರವರ ಮಂಜೂರಾತಿಯನ್ನ ಮುಂಚಿತವಾಗಿಯೇ ಪಡೆದು ಇಜಾರೇ ರದ್ದಾಗಿರುತ್ತೇದು ತೀಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖಿಲ್ ತನಖಾಂ ಬಾಕಿಗಳನ್ನೂ, ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ ಇತರ ವಿಲಾ ಮಾಡುವದರಿಂದಾಗಲಿ ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ, ಜಾಮೀನೀ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜರ್ಮಿ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ ಡೆಪ್ಯುಟಿ ಕಮ್ಮಿಷನರವರಿಗೆ ಎಖ್ತ್ಯಾರೀ ಇರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು, ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂತೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳ ಮೇಲೆ ಯಾವ ಅಂಗಡಿಗಳನ್ನಾದರೂ ತೆಗದುಹಾಕುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷ್ನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಯಾಗಿ ಯಾವ ಈಡು ಮೊಬಲಗನ್ನೂ ಕೇಳಕೂಡದು.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ, ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ವಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೇದಾರನು, ಗವರ್ನ್ಮೆಂಟಿನವರಿಂದಾ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮುಗಳ ಸರಹದ್ದುಗಳೊಳಗೆ, ಅಂತಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮುಗಳ ಹಿಡುವಳೀದಾರರ ಹಕ್ಕುದಾರೀಯನ್ನ ನಡಿಸಲಿಕ್ಕೆ ಗುತ್ತಿಗೇದಾರನು ಸಂಪೂರ್ಣ ಸ್ವಾತಂತ್ರ್ಯ ಉಂಟಾಗಿರಕ್ಕದ್ದು. ಮೇಲೆ ಹೇಳೋಣಾದ ಇನಾಂದಾರರುಗಳಿಗೆ ಸಲ್ಲಬೇಕಾದ ಶೇಂದಿ ಹುಟ್ಟುವಳಿಯು ಇಜಾರೇದಾರನು ಹಕ್ಕುದಾರಿ ಚಲಾಯಿಸಲಿ ಅಥವಾ ಚಲಾಯಿಸದೇ ಇರಲಿ ಇಜಾರೇದಾರರಿಂದ ಇನಾಂದಾರರಿಗೆ ಪಾವತಿಯಾಗತಕ್ಕದ್ದು. ಹಾಗೆ ಸಲ್ಲಬೇಕಾದ ಹುಟ್ಟುವಳಿ ಮೊಬಲಗಿನ ವಿಷಯದಲ್ಲಿ, ಅವರವರುಗಳಲ್ಲಿ ವಿಶೇಷವಾದ ವಡಂಬಡಿಕೆ ಹುಟ್ಟಿದ್ದ ಹೊರ್ತು ಜಾರಿಯಲ್ಲಿರುವ ರೂಲ್ಸ ಅನುಸರಿಸಿ ಮೊಕರರಾಗತಕ್ಕದ್ದು. ಅಂತಾ ರೂಲ್ಸಗಳ್ಯಾವದೂ ಇಲ್ಲದೆಯಿದ್ದ ಪಕ್ಷದಲ್ಲಿ ಮಾಮೂಲ ಅನುಸರಿಸಿ ಮೊಕರರಾಗತಕ್ಕದ್ದು. ಅಂತಾ ಇನಾಂದಾರರಿಗೆ ಸಲ್ಲಬೇಕಾದ ಶೇಂದಿ ಹುಟ್ಟುವಳಿ ಬಗ್ಯಾಗಿಯಾಗಲಿ, ಅಥವಾ ಇಜಾರೆದಾರನಿಂದ ಇನಾಂದಾರ್ರಿಗೆ ಸಲ್ಲಬೇಕಾಗುವ ಶೇಂದಿ ಹುಟ್ಟುವಳೀ ಮೊಬಲಗಿನ ವಿಷಯದಲ್ಲಾಗಲಿ ಅವರವರುಗಳಲ್ಲಿ ತಕರಾರು ಉಂಟಾದಲ್ಲಿ, ಆ ಪೈಕೀ ಯಾರೇ ಆಗಲಿ ಡಿಪ್ಯುಟಿ ಕಮ್ಮಿಷನರಿಗೆ ಫಿರ್ಯಾದ್ ಮಾಡಿದಲ್ಲಿ, ಆಗ ಅವರು ಯುಕ್ತ ಮತ್ತು ನ್ಯಾಯ ಅನುಸರಿಸಿ ಫೈಸಲ್‌ಮಾಡತಕ್ಕದ್ದು, ಅಂತಾ ಫೈಸಲಿಗೆ ಗುತ್ತಿಗೇದಾರನು ಬದ್ಧನಾಗಿರತಕ್ಕದ್ದು. ಸದರೀ ಫೈಸಲ ಅಪ್ಪೀಲಿನಲ್ಲಿ ಗಾರ್ವಮೆಂಟಿನವರ ಕಾಯಮಿಗಾಗಲಿ ಅಥವಾ ಅನ್ಯಥಾ ತೀರ್ಪಿಗಾಗಲಿ ಗುರಿಯಗಿರತಕ್ಕದ್ದು. ಡೆಪ್ಯುಟಿ ಕಮ್ಮಿಷ್ನರವರಿಂದ ಅಥವಾ ಫೈಸಲಾತಿಯಲ್ಲಿ ಯಾಗಲೀ ಅಥವಾ ಗವರ್ನಮೆಂಟಿನವರಿಂದ ಅಪ್ಪೀಲ್‌ನಲ್ಲಾಗಲೀ ಪಾವತೀ ಮಾಡಲ್ಪಡಬೇಕೆಂತ ಹುಕುಂ ಮಾಡಲ್ಪಟ್ಟ ಮೊಬಲಗು ಜರ್ಮಿ ಕಂದಾಯದ ಬಾಕೀ ವಸೂಲ್ ಬಗ್ಯೆ ತತ್ಕಾಲದಲ್ಲಿ ಜಾರಿ ಇರತಕ್ಕ ರೂಲ್‌ಸ ಅನುಸರಿಸಿ ಇಜಾರೇದಾರನಿಂದ ವಸೂಲ್ ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆರಿಯಲ್ಪಡಕೂಡದು. ಮತ್ತು ತಮಾಂ ಅಂಗಡಿಗಳೂ ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕದ್ದು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಫುರೋಖ್ತು ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಫೌಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

44

ಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಹಿಡುವಳಿಯಲ್ಲಿ ಬರತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ತಾಲ್ಲೂಕುಗಳಿಗೆ ಶೇಂದೀ ಒದಗಿಸುವದಕ್ಕೋಸ್ಕರವಾಗಲಿ, ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಲಿ, ಈಡು ಕೇಳುವದಕ್ಕೆ ಹಕ್ಕುಯಿರುವದಿಲ್ಲ. ಡೆಪ್ಯುಟಿ ಕಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತ್ತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ ಮಾಡಲ್ಪಡತಕ್ಕದ್ದು.

XI ಇಜಾರೇದಾರನು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್ವಾಕಾ ಲೆಕ್ಕಗಳು ಇಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಇಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದೀ ಕಟ್ಟಿದ ಮರಗಳ ಸಂಖ್ಯೆ (3) ರೋಜೇನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದು, (4) ರೋಜೇನಾ ಬಿಕರೀ ಮಾಡಲ್ಪಟ್ಟ ಶೇಂದಿಯ ತೇದಾದು, ಮತ್ತು (5) ಶೇಂದಿಯು ಸರಬರಾಯಿ ಮಾಡಲ್ಪಟ್ಟ ದುಕಾನ್‌ಗಳ ಹೆಸರುಗಳು, ಈ ಬಾಬತು ತಪಸೀಲುಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್ದಾರರಿಂದಾಗಲಿ ಯಾ ಆ ಬಗ್ಗ್ಯಾಗಿ ಡೆಪ್ಯುಟಿ ಕಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಇತರ ಆಫೀಸರರಿಂದಾಗಲಿ ತನಿಖೀ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕವು, ಮತ್ತು ಇವುಗಳ ನಕಲು ಡೆಪ್ಯುಟಿ ಕಮಿಷನರವರಿಂದಾಗಲಿ ಅಮಲ್ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಗವರ್ನಮೆಂಟನವರಿಂದ ವಿಧಿಸಲ್ಪಡುವಂತಾ ನಮೂನೆಯಲ್ಲಿ ಇಜಾರೇದಾರರಿಂದ ಹಾಜರ್ಮಾಡಲ್ಪಡತಕ್ಕದ್ದು.

X. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ ಗವರ್ನಮೆಂಟನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು ಈಡಿಗೆ ಯಾ ಸೋಡಿಗೆ ಬಾಧ್ಯತೆ ವುಳ್ಳವನಾಗಿರುವದಿಲ್ಲ. ತಾಲ್ಲೂಕ್ ಪೈಕೀ ಯಾವ ಭಾಗಗಳಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮೌಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

XI. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ ಅಥವಾ ಕೆಲಸದ ಮೇಲಿರುವಲ್ಲಿ ಬಬ್ಬ ಶಿಪಾಯಿಗಾಗಲಿ, ಪೋಲಿಸಿನವನಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಖಿಲಾಫಾಗಲಿ ನಡೆದಲ್ಲಿ ಅದರಿಂದ ಯಿಜಾರೇದಾರ ಯಾ ಬಿಕರೀದಾರ ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಬಿಕರೀದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

XII. ಗುತ್ತಿಗೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರೆಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೆಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ ಇರುವ ಬಗ್ಯೆ ಜವಾಬ್ದಾರನಾಗಿರತಕ್ಕದ್ದು. ಮತ್ತು ಗಿಡಗಳು ಸತ್ತುಹೋಗುವಂತೆ ಅಜಾಗ್ರತೆಯಾಗಿ ಶೇಂದಿ ಕಟ್ಟಕೂಡದು. ಈ ನಿಬಂಧನೆಗಳಿಗೆ ಯೇನಾದರೂ ಬರಖಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಯಿಜಾರೇದಾರ ಗುರಿಯಾಗತಕ್ಕದ್ದು.

XIII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

	ಶೇರುವಂದಕ್ಕೆ ಖರೀದಿ.	
	ಜೇಸ್ತಿ.	ಕಮ್ಮಿ.
	ರೂ. ಆ. ಪೈ.	ರೂ. ಆ. ಪೈ.
ತುಮಕೂರು ಡಿಸ್ಟ್ರಿಕ್ಟಿನ ತಾಲ್ಲೂಕು ಕಸಬಾಗಳಲ್ಲಿ	0—1—3	0—0—10
ಡಿಟೋ ಡಿಟೋ ಗ್ರಾಮಗಾನೆಗಳಲ್ಲಿ	0—1—0	0—0—8

8. ಶೇಂದೀ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

9. 1886—87ನೇ ಇಸವಿ ಲಾಗಾಯತು ಸಾಲೀಯಾನಾ ಶೇಂದಿ ಹುಟ್ಟುವಳಿಯು ಇದರಡಿ ನಮೂದಿಸಲ್ಪಟ್ಟಿರುತ್ತದೆ. ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನು ಡೆಪ್ಯುಟಿ ಕಮಿಷನರವರ ಆಫಿಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

1886—87	ರೂ.	74,526
1887—88		1,24,050

ಹಾಸನ ಡಿಸ್ಟ್ರಿಕ್ಟು.

ಹಾಸನ ಡಿಸ್ಟ್ರಿಕ್ಟಿಗೆ ಶೇರಿದ ಯಿದರಡೀ ಕಂಡ ತಾಲ್ಲೂಕುಗಳಲ್ಲಿ 1890ನೇ ಇಸವಿ ಏಪ್ರೆಲ್ 1ನೇ ತಾರೀಖು ಮೊದಲು 1892ನೇ ಇಸವಿ ಮಾರ್ಚಿ 31ನೇ ತಾರೀಖು ವರಿಗೆ ಆಗುವ ಎರುಡು ವರುಷ ಕಾಲಪರಿಯಂತ ಶೇಂದೀ ಬಿಕ್ರೀ ಮಾಡುವ ವಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತುಗಳು ಕೋರಲ್ಪಟ್ಟಿವೆ:—

1 ಹಾಸನ (ಗ್ರಾಮದ ಡೆ॥ ಅಮಲ್‌ದಾರ್ರ ಚಾರ್ಜು ದೇಖಿಲ್).
2 ಮಂಜಿರಾಬಾದ್
3 ಚನ್ನರಾಯಪಟ್ಣ
4 ಹೊಳೆ ನರಸೀಪುರ
5 ಬೇಲೂರು
6 ಅರ್ಸೀಕೆರೆ
7 ಅರಕಲಗೂಡು

ಶೇಂದಿ ಇಜಾರೆಯು ಸದರೀ ಕಾಲದಲ್ಲಿ ಮಲ್‌ನಾಡ್ ತಾಲ್ಲೂಕುಗಳಲ್ಲಿ ಬಗನೀ ಶೇಂದಿಯನ್ನು ಪುರೋಖ್ತು ಮಾಡತಕ್ಕ ಹಕ್ಕುದಾರಿಯನ್ನು ಅಡಗಿರುವದಿಲ್ಲ, ಸದರೀ ಹಕ್ಕುದಾರಿಯು ಗ್ರಾಮವಾರ್ ಅಥವಾ ಕೆಲವು ಗ್ರಾಮಗಳು ಶೇರಿ ವಟ್ಟಾಗಿ ಅಲಾಹಿದಾ ಇಜಾರೆಗೆ ಕೊಡಲ್ಪಡುವದು.

2. ಪ್ರತಿ ದರಖಾಸ್ತೂ ದರಖಾಸ್ತುದಾರನ ಯಿಚ್ಛಾನುಸಾರ ಮೇಲೆ ಕಂಡ ಯಲ್ಲಾತಾಲ್ಲೂಕುಗಳಿಗಾಗಲಿ, ಯಾವದಾದರೂ ಒಂದು ಯಾ ಹೆಚ್ಚು ತಾಲ್ಲೂಕುಗಳಿಗಾಗಲಿ ಕಳುಹಿಸಲ್ಪಡಬಹುದು.

3. ಪ್ರತಿ ದರಖಾಸ್ತಿನಲ್ಲಿಯೂ ಸದರೀ ದರಖಾಸ್ತು ಯಾವದಕ್ಕಾಗಿ ಕಳುಹಿಸಲ್ಪಡುತ್ತೊ (ಅಂಥಾ ತಾಲ್ಲೂಕು ಯಾ ತಾಲ್ಲೂಕುಗಳ ಹೆಸರನ್ನೂ ನಮೂದಿಸತಕ್ಕದ್ದಲ್ಲದೆ ಪ್ರತಿ ಒಂದು ತಾಲ್ಲೂಕಿಗೂ ಸಾಲಿಯಾನಾ ಕೊಡುವದಾಗಿ ಒಪ್ಪುವ ಮೊಬಲಗನ್ನೂ ನಮೂದಿಸತಕ್ಕದ್ದು, ಮತ್ತು ದರಖಾಸ್ತು ಮಾಡುವಂಥಾ ತಾಲ್ಲೂಕು ಒಂದಕ್ಕೆ ಒಂದು ನೂರು ರೂಪಾಯಿಗಳ ಪ್ರಕಾರ ಆಗುವ ಠೇವಣಿ ಮೊಬಲಗು ದರಖಾಸ್ತಿ ನೊಡನೆ ಕಳುಹಿಸಲ್ಪಡತಕ್ಕದ್ದು. ಠೇವಣಿ ಮೊಬಲಗು ನಗದಾಗಿಯಾಗಲಿ, ಮೈಸೂರು ದಿವಾನರವರ ಹೆಸರಿಗೆ ಕ್ರಮವಾಗಿ ಷರಾ ಬರೆಯಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ ಕಳುಹಿಸಲ್ಪಡತಕ್ಕದ್ದು.

4. ಪ್ರತಿ ದರಖಾಸ್ತೂ ಮೊಹರ್ ಮಾಡಲ್ಪಟ್ಟು ಲಕೋಟೆಗಳಿಗೆ ಹಾಕಲ್ಪಟ್ಟು "1890ನೇ ಇಸವಿ ಲಾಗಾಯತು ಎರಡು ವರುಷಗಳ ಪರಿಯಂತ ಶೇಂದಿ ಬಿಕರೀ ಮಾಡುವ ಒಟ್ಟು ಸ್ವಾತಂತ್ರ್ಯದ ಬಗ್ಯೆ ದರಖಾಸ್ತು" ಯಂಬದಾಗಿ ವಿಳಾಸ ಬರೆಯಲ್ಪಡತಕ್ಕದ್ದು.

5. ದರಖಾಸ್ತುಗಳು, ಸನ್ 1890ನೇ ಇಸವಿ ಮಾರ್ಚಿ 5ನೇ ಮರ್ಸುಮಿನ ಮಧ್ಯಾನ್ಹದೊಳಗಾಗಲಿ, ತತ್ಪೂರ್ವವಾಗಲಿ ಹಾಸನ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರನ ದರಖಾಸ್ತನ್ನು ಯಕ್ಸೈಜ್ ಕಮ್ಮಿಷನರವರ ದ್ವಾರ ದಿವಾನರವರಿಗೆ ಸಿಫಾರಸ್ ಮಾಡುವ ಬಗ್ಯೆ ಡೆಪ್ಯುಟಿ ಕಮ್ಮಿಷನರವರು ಚುನಾಯಿಸುತ್ತಾರೋ ಅಂಥಾ ದರಖಾಸ್ತುದಾರನು ಕೂಡ್ಲೆ ನಗದಾಗಿಯಾಗಲಿ, ಕ್ರಮಪ್ರಕಾರ ಮೈಸೂರು ದಿವಾನರವರ ಹೆಸರಿಗೆ ಯಿಂಡಾರಸು ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದು ಭಾಗವಾಗಲಿ (ಅಥವಾ ಒಂದು ತಿಂಗಳ ಬಿಸ್ತು ಮೊಬಲಗಾಗಲಿ) ಜಾಸ್ತಿಯಾಗಿ ಡಿಪಾಜಿಟ ಇಡತಕ್ಕದ್ದು, ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ ಮೊಬಲಗು ಸರಕಾರಕ್ಕೆ ದಂಡವಾಗಿ ತೆಗೆದುಕೊಳ್ಳಲ್ಪಡುವದು.

6. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂಥಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ ಮಾಡಲ್ಪಡುವದು. ಚಡದರಖಾಸ್ತನ್ನಾಗಲಿ, ಯಾವ ದರಖಾಸ್ತನ್ನಾಗಲಿ, ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ಯಿರಿಸಿಕೊಂಡಿರುತ್ತಾರೆ.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ಯಂಟು ದಿನಗಳೊಳಗಾಗಿ 3 ವ-5ನೇ ಕಲಂ ಅನುಸರಿಸಿ, ಮೊದಲೇ ಡಿಪಾಜಿಟ ಯಿಟ್ಟಿರುವ ಮೊಬಲಗ್ ದೇಖಿಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ನಗದಾಗಿಯಾಗಲೀ ಕ್ರಮ ಪ್ರಕಾರ ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ ಡೆಪ್ಯುಟಿ ಕಮ್ಮಿಷನರವರಲ್ಲಿ ಡಿಪಾಜಿಟ ಇಡತಕ್ಕದ್ದು, ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್ತುಗಳಿಗೆ ಇಜಾರೆದಾರನು ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾಕಾಗದದ ಮೇಲೆ ಒಂದು ಕರಾರು ಬರೆದು ಕೊಡತಕ್ಕದ್ದು. ಆತನು ಕರಾರಿಗೆ ರುಜುಮಾಡುವದಕ್ಕಾಗಲೀ, ಅಪೇಕ್ಷಿಸಲ್ಪಟ್ಟ ಡಿಪಾಜಿಟ ಇಡಲಿಕ್ಕಾಗಲಿ, ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟಗಳು ಗವರ್ನಮೆಂಟಿಗೆ ...

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಒಂದಾಣೇ ಪ್ರಕಾರ ಆಗುವ ವಿಧಿಸಲ್ಪಟ್ಟ ಲೋಕಲ್‌ಸೆಸ ದೇಖಿಲ್ ಅಂತಾ ಇಜಾರೆ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ, ಅದಕ್ಕೆ ಮುಂದಾಗಿಯಾಗಲಿ ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಮಾಹೇಯಾನಾ ಸಮಾನಾದ ಖಿಸ್ತುಗಳ ಪ್ರಕಾರ ಪಾವತೀಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ ಶೇಕಡಾ ಸಾಲಿಯಾನಾ 6ರ ಪ್ರಕಾರ ಬಡ್ಡೀ ಕೊಡಲ್ಪಡತಕ್ಕದ್ದು. ಅಂಥಾ ಬಾಕೀ ಮೊಬಲಗುಗಳು ಪಾವತೀಯಾಗತಕ್ಕ ತಿಂಗಳು ಕಳೆದ ಮೇಲೆ ಪಾವತೀಯಾಗದೇ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲಿಜಾರೀ ಇರುವ ರೂಲ್ಸಿನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು, ಮತ್ತು ಯಕ್ಸೈಜ್ ಕಮ್ಮಿಷನರವರ ದ್ವಾರಾ ದಿವಾನರವರ ಮಂಜೂರಾತಿಯನ್ನು ಪಡೆದು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ ಯಾ ಅಮಾನೀ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ ಹಾಗೆ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲೆ ಮಾಡುವದರಿಂದಾಗಲಿ ಉಂಟಾಗತಕ್ಕ ಯಾವತೂದರೂ ನಷ್ಟಗಳನ್ನೂ, ಜಾಮೀನಿ ಮೊಬಲಗ್ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಯಿರತಕ್ಕದ್ದು.

II. ಚಿಲ್ಲರೆ ಫುರೋಖ್ತುದಾರರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ ಇಜಾರೆದಾರನು ಹಾಲೀ ಶೇಂದಿ ಫುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೆ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳ ಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರವರು ಅರ್ಹರಾಗಿರುತ್ತಾರೆ, ಮತ್ತು ಇಜಾರೇದಾರನು ಆಬಗ್ಯಾಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ ತೆಗದುಕೊಳ್ಳಕೂಡದು.

IV. ಇಜಾರೇದಾರನು ಮೈಸೂರು ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ ತಮ್ಮ ಗ್ರಾಮಗಳ ಸರಹದ್ದುಗಳೊಳಗೆ ಅಂಥಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗ್ಯೆರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರರ ಹಕ್ಕುದಾರಿಗಳನ್ನು ಶೇಂದಿ ಹುಟ್ಟುವಳಿ ವಿಷಯದಲ್ಲಿ ಗುತ್ತಿಗೇದಾರನು ಚಲಾಯಿಸುವದಕ್ಕೆ ಪೂರ್ತಿಯಾಗಿ ಸ್ವಾತಂತ್ರ್ಯನಾಗಿರುತ್ತಾನೆ. ಅಂಥಾ ಇನಾಮುದಾರರುಗಳ ಶೇಂದಿ ಹಕ್ಕುದಾರಿಗಳನ್ನು ಇಜಾರೇದಾರನು ಚಲಾಯಿಸಿದಾಗ್ಯೂ ಸರಿಯೆ ಅಥವಾ ಇಲ್ಲದಿದ್ದರೂ ಸರಿಯೆ ಮೇಲ್ಕಂಡ ಇನಾಂ ದಾರರುಗಳಿಗೆ ಸಲ್ಲಬೇಕಾದ ಶೇಂದಿ ಹುಟ್ಟುವಳಿಯು ಇಜಾರೇದಾರನಿಂದ ಪಾವತೀ ಮಾಡಲ್ಪಡತಕ್ಕದ್ದು, ಮತ್ತು ಅಂಥಾ ಮೊಬಲಗಿನ ವಿಷಯದಲ್ಲಿ ಇಜಾರೇದಾರರಿಗೂ, ಇನಾಂದಾರರಿಗೂ ಯಾವದಾದರೂ ವಿಶೇಷ ವಡಂಬಡಿಕೆ ಇಲ್ಲದ ಪಕ್ಷದಲ್ಲಿ ಜಾರಿಯಲ್ಲಿರತಕ್ಕ ರೂಲ್ಸ್ ಅನುಸರಿಸಿ ಗೊತ್ತುಮಾಡಲ್ಪಡತಕ್ಕದ್ದು, ಮತ್ತು ಅಂಥಾ ರೂಲ್ಸ್ ಇಲ್ಲದ ಪಕ್ಷಕ್ಕೆ ಮಾಮೂಲ್ ಅನುಸರಿಸಿ ಗೊತ್ತುಮಾಡಲ್ಪಡತಕ್ಕದ್ದು. ಶೇಂದಿ ಹುಟ್ಟುವಳಿಗಾಗಿ ಇನಾಂದಾರರ ಹಕ್ಕುದಾರೀಕುರಿತಾಗಲಿ ಅಥವಾ ಇಜಾರೇದಾರನಿಂದ ಇನಾಂದಾರರಿಗೆ ಸಲ್ಲಬೇಕಾದ ಶೇಂದಿ ಹುಟ್ಟುವಳಿ ಮೊಬಲಿಗಿನ ಮೊತ್ತದ ವಿಷಯದಲ್ಲಾಗಲಿ ತಕರಾರ್ ಸಂಭವಿಸಿದರೆ ಅಂಥಾ ತಕರಾರು ಕುರಿತು ಇಜಾರೇ ದಾರನಿಂದಲಾಗಲಿ, ಇನಾಮುದಾರರಿಂದಲಾಗಲಿ ಫಿರ್ಯಾದು ಬಂದ ತರುವಾಯ ಡೆಪ್ಯುಟಿ ಕಮ್ಮಿಷನರವರು ಸದರೀ ತಕರಾರನ್ನು ಯುಕ್ತಾನುಸಾರ ನ್ಯಾಯ್ಯವಿದ್ದಂತೆ ಫೈಸಲ್ಮಾಡತಕ್ಕದ್ದು, ಮತ್ತು ಅಂಥಾ ಫೈಸಲಿಗೆ ಇಜಾರೇದಾರನು ಬದ್ಧನಾಗಿರತಕ್ಕದ್ದು. ಪರಂತು ಸದರೀ ಫೈಸಲ್ ಅಪ್ಪೀಲಿನಲ್ಲಿ ಗವರ್ನಮೆಂಟಿನಿಂದ ಕಾಯಂಮಾಡಲ್ಪಡಲಿಕ್ಕಾಗಲಿ, ಅನ್ಯಥಾ ಆಗಲಿ ಗುರಿಯಾಗಿ ಇರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರಿಂದ ಅಂಥಾ ಫೈಸಲಾತಿಯಲ್ಲಾಗಲಿ ಅಥವಾ ಗವರ್ನಮೆಂಟಿನಿಂದ ಅಪ್ಪೀಲಿನಲ್ಲಾಗಲಿ ಪಾವತಿ ಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು, ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯಾಗಿ ತತ್ಕಾಲದಲ್ಲಿ ಜಾರೀಯಲ್ಲಿ ಇರತಕ್ಕ ರೂಲ್ಸ್ ಅನುಸರಿಸಿ ಇಜಾರೇದಾರನಿಂದ ವಸೂಲ್ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದೀ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರ್ತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚಲ್ಪಡುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಗೆ ಈಡು ಕೊಡುವಂತೆ ಕೇಳಕೂಡದು. "ಅಂಥಾ ಘೋಷಣೆವರು" ತಮ್ಮ ಕಡೆ ಅಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯ್ಯವಾಗಿ ಇರತಕ್ಕದ್ದು.

VIII. ಇಜಾರೇದಾರನು ಸರಕಾರದ ಬಂಜರ ಜಮೀನಲ್ಲಿ ಇರುವ ಈಚಲು ಮರಗಳನ್ನು ಇಜಾರೇಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಗ್ಯಾಗಲಿ, ಜಿಲ್ಲ ತಯಾರ್ಮಾಡುವ ಬಗ್ಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು: ಪರಂತು ಸಾಗುವಳಿಗೋಸ್ಕರವಾಗಲಿ, ಇತರ ಕಾರ್ಯಕ್ಕಾಗಲಿ ಈಗ್ಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ತಾಲ್ಲೂಕುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ ವ ಷರತ್‌ಗಳ ಪ್ರಕಾರವೂ ಮಾತ್ರವೇ ಜಿಲ್ಲ ತಯಾರ್ಮಾಡತಕ್ಕದ್ದು.

IX. ಯಿಜಾರೇದಾರರು ಪ್ರತಿ ತಾಲ್ಲೂಕಿಗೂ ಸಾಬಾ ಮತ್ತು ಕರಾರ್‌ವಾಕಾ ಲೆಕ್ಕಗಳು ಯಿಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಯಿಳಿಸಲ್ಪಟ್ಟ ಶೇಂದಿ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದಿ ಕಟ್ಟಿದ್ದ ಮರಗಳ ಸಂಖ್ಯೆ, (3) ರೋಜೇನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದು, (4) ರೋಜೇನಾ ಬಿಕ್ರೀ ಮಾಡಲ್ಪಟ್ಟ ಶೇಂದಿಯ ತೇದಾದು ಮತ್ತು (5) ಶೇಂದಿಯು ಸರಬರಾಯಿ ಮಾಡಲ್ಪಟ್ಟ ದುಕ್ಕಾಣಗಳ ಹೆಸರು ಈ ಬಾಬತು ತಪಶೀಲ್‌ಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್‌ದಾರರಿಂದಾಗಲಿ ಯಾ ಆಬಗ್ಗ್ಯಾಗಿ ಡೆಪ್ಯುಟಿ ಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಯಿತರ ಯಾವ ಆಫಿಸರಿಂದಾಗಲಿ ತನಿಖೆ ನೋಡಲ್ಪಡತಕ್ಕ ಬಗ್ಗ್ಯೆ ಖುಲ್ಲಾ ಯಿರತಕ್ಕವು, ಮತ್ತು ಇವುಗಳ ನಕಲು ಡೆಪ್ಯುಟಿ ಕಮ್ಮಿಷನರವರಿಂದಾಗಲಿ, ಅಮಲ್‌ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಗವರ್ನಮೆಂಟಿನಿಂದ ವಿಧಿಸಲ್ಪಟ್ಟ ನಮೂನೆಯಲ್ಲಿ ಇಜಾರೇದಾರನಿಂದಾ ಹಾಜರ್ ಮಾಡಲ್ಪಡತಕ್ಕದ್ದು.

X. ಬಿಯರ್ ಸಾರಾಯಿ ವಿಷಯದಲ್ಲಾಗಲಿ, ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು ಈಡಿಗೆ ಯಾ ನೋಡೀಗೆ ಬಾಧ್ಯತೆ ಉಳ್ಳವನಾಗಿರುವದಿಲ್ಲ. ತಾಲ್ಲೂಕಿಗೆ ಸೇರಿದ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೆಯನ್ನು ಮಾಕೂಫ್ ಮಾಡಿ ಆ ಬಗ್ಗ್ಯೆ ನ್ಯಾಯ್ಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

XI. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯುರೇಷಿಯನ್ ಹೆಂಗಸು ಯಾ ಮಗುವಿಗಾಗಲಿ ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವನಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು ಯಾ ಕೊಡಕೂಡದು, ಮತ್ತು ಈ ನಿಬಂಧನೆಗಳಿಗೆ ಯಾವ ಬರಕಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೇದಾರನು ಯಾ ಪುರೋಖ್ತುದಾರನು ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಪುರೋಖ್ತುದಾರನ ಲೈಸೆನ್ಸು ರದ್ದಾಗಲಿಕ್ಕೂ ಗುರಿಯಾಗಿರುತ್ತೆ.

XII. ಗುತ್ತಿಗೇದಾರನು ತನ್ನ ನವುಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರೆಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಯಿಳಿಸದೆಯೂ, ಮತ್ತು ಶೇಂದಿ ಯಿಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಗ್ಯೆ ಜವಾಬ್‌ದಾರನಾಗಿರತಕ್ಕದ್ದು, ಮತ್ತು ಯಾವ ಮರಗಳನ್ನಾಗಲಿ ಅವು ಸತ್ತು ಹೋಗುವಂತೆ ಅಶ್ರದ್ಧೆಯಾಗಿ ಕಟ್ಟಕೂಡದು. ಈ ನಿಬಂಧನೆಗಳಿಗೆ ಏನಾದರೂ ಬರಕಿಲಾಫ್ ನಡೆದರೆ ಅದರಿಂದ ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗಿರತಕ್ಕದ್ದು.

XIII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.—

	ಶೇರುವಂದಕ್ಕೆ ಖರೀದಿ: ಜಾಸ್ತಿ	ಶೇರುವಂದಕ್ಕೆ ಖರೀದಿ: ಕಮ್ಮಿ
	ರೂ. ಆ. ಪೈ.	ರೂ. ಆ. ಪೈ.
ಹಾಸನ ಷಹರಿನಲ್ಲಿ	0—1—0	0—0—10
ಇತರ ತಾಲ್ಲೂಕು ಕಸಬಾಗಳಲ್ಲಿ	0—1—0	0—0—6
ಗಾವಗಾನೆಗಳಲ್ಲಿ	0—0—6	0—0—4

8. ಶೇಂದಿ ಸಾಗಿಸುವಬಗ್ಗೆ ಉಪಯೋಗಿಸಲ್ಪಡುವ ಭಂಡಿಗಳ ವಿಧಿಸಲ್ಪಟ್ಟ ಮೊಹತರಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

9. ಸರ್1886—87ನೇ ಇಸವಿ ಲಾಗಾಯತು ಸಾಲೀಯಾನಾ ಶೇಂದಿ ಹುಟ್ಟುವಳಿಯು ಇದರಡಿ ನಮೂದಿಸಲ್ಪಟ್ಟಿರುತ್ತೆ. ಯಿತರ ಯಾವದಾದರೂ ವಿಷಯುಗಳನ್ನು ಕುರಿತ ಸಂಗತಿಯನ್ನು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

		ರೂ.			ರೂ.
1886—87	..	47,100	1888—89	..	45,000
1887—88	..	45,000	1889—90	..	45,000

ಶಿವಮೊಗ್ಗಾ ಡಿಸ್ಟ್ರಿಕ್ಟು.

ಶಿವಮೊಗ್ಗಾ ಡಿಸ್ಟ್ರಿಕ್ಟಿನಲ್ಲಿ 1890ನೇ ಇಸವಿ ಯೇಪ್ರೈಲ್ ಗುರ್ರೇ ಲಾಗಾಯಿತು 1892ನೇ ಇಸವಿ ಮಾರ್ಚಿ 31ನೇ ತಾರೀಖು ವರಿವಿಗೆ ಆಗುವ 2 ಸಂವತ್ಸರಗಳ ಪರ್ಯಂತ ಶೇಂದೀ ಇಜಾರೆ ಯಾ ಶೇಂದೀ ಬಿಕ್ರೀ ಮಾಡುವ ಪೊಟ್ಟು ಸ್ವಾತಂತ್ರ್ಯವು ತಾಲ್ಲೂಕುವಾರಾಗಲಿ ತಾಲ್ಲೂಕುಗಳ ಸೇರಿಕೆಯಾಗಿಯಾಗಲಿ ಇದರ ಮುಂದೆ ತಿಳಿಸಲ್ಪಡುವ ಷರತ್ತುಗಳಿಗೆ ಪೊಳಪಟ್ಟು 1890ನೇ ಇಸವಿ ಮಾರ್ಚಿ 10ನೇ ತಾರೀಖಿನ ಮಧ್ಯಾನ್ಹ 12 ಘಂಟೆಗೆ ಅವರ ಆಫಿಸಿನಲ್ಲಿ ಶಿವಮೊಗ್ಗಾ ಡಿಪ್ಯುಟಿ ಕಮ್ಮಿಷನರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಶೇಂದಿ ಇಜಾರೆಯು ಮೇಲ್ಕಂಡ 2 ವರುಷಗಳ ಕಾಲದಲ್ಲಿ ಮಲ್‍ನಾಡ್ ತಾಲ್ಲೂಕುಗಳಲ್ಲಿ ಬಗನೀ ಶೇಂದಿಯನ್ನ ಫುರೋಖ್ ಮಾಡುವ ಸ್ವಾತಂತ್ರ್ಯವನ್ನು ಅಡಗಿಸಿಕ್ಕೊಂಡಿರುವದಿಲ್ಲಾ. ಸದರೀ ಬಗನೀ ಶೇಂದಿ ಫುರೋಖ್ತು ಮಾಡುವ ಸ್ವಾತಂತ್ರ್ಯವು ಗ್ರಾಮವಾರಾಗಲಿ ಗ್ರಾಮಗಳ ಶೇರಿಕೆಯಾಗಿಯಾಗಲಿ ಅಲಾಯಿದಾ ಇಜಾರೆಗೆ ಕೊಡಲ್ಪಡುವದು. ಶಿವಮೊಗ್ಗಾ ಡಿಸ್ಟ್ರಿಕ್ಟಿಗೆ ಇದರಡಿ ಕಂಡ ತಾಲ್ಲೂಕುಗಳು ಶೇರಿರುತ್ತವೆ.

1 ಶಿವಮೊಗ್ಗ ಕುಂಸಿ ಡೆಪ್ಯುಟಿ ಅಮಲ್ದಾರ್ರ ಚಾರ್ಜ ಸಹ.	5 ನಗರ.
2 ತೀರ್ಥಹಳ್ಳಿ.	6 ಸೊರಬ.
3 ಚನ್ನಗಿರಿ.	7 ಹೊನ್ನಾಳಿ.
4 ಸಾಗರ.	8 ಶಿಕಾರಿಪುರ.

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರಕಾರದ ಸವಾಲಿಗೆ ಮೇಲಟ್ಟ ಬರತಕ್ಕ ಚಡ ದರಖಾಸ್ತುದಾರರಿಗೆ ಹರಾಜುಮೂಲಕ ದಿವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು, ಸದರೀ ಸಾಲೀಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಫಾಯಿಷ್ ಮಾಡಲ್ಪಡುತ್ತೆ. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮ ಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿಯಾಗಲಿ ಹಾಜರಾಗತಕ್ಕದ್ದು. ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರಕಾರದ ಸವಾಲಿನ ಮೊಬಲಗಿನಮೇಲೆ ಶೇಕಡಾ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಇಡಲ್ಪಡುವ ತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜ್ ಆಖೈರ ಕಾಲದಲ್ಲಿ ಅವರಿಗೆ ವಾಪಸ ಪಾವತೀ ಮಾಡಲ್ಪಡುವದು.

4. ಯಾವ ಚಡ ದರಖಾಸ್ತುದಾರನ ದರಖಾಸ್ತು ಯಕ್ಸೈಜ್ ಕಮ್ಮಿಷನರ ದ್ವಾರಾ ದಿವಾನರವರ ಮಂಜೂರಾತಿ ಬಗ್ಗೆ ಚುನಾಯಿಸಿಕೊಳ್ಳಲ್ಪಡುತ್ತೋ ಅಂಥಾ ಚಡ ದರಖಾಸ್ತುದಾರನು ಮೊದಲೇ ಡಿಪಾಜಿಟ್ ಇಟ್ಟಿರುವ ಮೊಬಲಗು ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡಲೆ ಠೇವಣಿ ಇಡತಕ್ಕದ್ದು. ಆತನು ದಿವಾರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ ಪೂರ್ವ ಡಿಪಾಜಿಟ್ ಇಟ್ಟಿರುವ ಮೊಬಲಗುಗಳು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ಇಜಾರೇ ಷರತ್ತುಗಳಂತೆ ಕ್ರಮ ಪ್ರಕಾರ ನಡದುಕೊಳ್ಳುವ ಬಗ್ಗೆ ಜಾಮೀನಿ ತರೀಕ್ ನಗದಾಗಿಯಾಗಲಿ ಕ್ರಮ ಪ್ರಕಾರ ಮೈಸೂರು ಖಿಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ್ ಪತ್ರಗಳ ಮೂಲಕವಾಗಿಯಾಗಲಿ ಡೆಪ್ಯುಟಿ ಕಮ್ಮಿಷ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿಯಲ್ಲಿ ಅರ್ಧಭಾಗವನ್ನು ನಗದಾಗಿಯಾಗಲಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಯೆ ಯರಡರಷ್ಟು ಕ್ರಯ ಬಾಳುವ ಮತ್ತು ಯಾವ ಬಾಧ್ಯತೆ ವ ದೇಣಿಗಳೂ ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿಯಾಗಲಿ ಹಾಜರ್ಮಾಡತಕ್ಕದ್ದು. ಮತ್ತು ಇದರಲ್ಲಿ ವಿಧಿಸಲ್ಪಟ್ಟ ಷರತಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದ ಮೇಲೆ, ಒಂದು ಕರಾರ್ ಬರದುಕೊಡತಕ್ಕದ್ದು.

5. ಆತನು ಹಿಂದಿನ ಕಲಂನಲ್ಲಿ ಕಂಡಂತೆ ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕೆ ತಪ್ಪಿದರೆ ಯಾ ಅಪೇಕ್ಷಿಸಲ್ಪಟ್ಟ ಕರಾರನ್ನು ಬರದುಕೊಡಲಿಕ್ಕೆ ನಿರಾಕರಿಸಿದರೆ ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‍ಗಳು ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು ಪುನಃ ಹರಾ

ಜು ಮಾಡಲ್ಪಡುವದು ಯಾ ಅನ್ಯಥಾ ವಿಲಾ ಮಾಡಲ್ಪಡುವದು. ಹಾಗೆ ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲಾ ಮಾಡುವದರಿಂದ ಉಂಟಾಗುವ ನಷ್ಟವು ಆತನಿಂದ ಜಮೀನು ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಜಪ್ತೀಹರಾಜಿನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ಇಜಾರೇ ಮೊಬಲಗಿನಮೇಲೆ ರೂಪಾಯಿಗೆ ಬಂಧಾಣೆ ಪ್ರಕಾರ ಆಗುವ ವಿಧಿಸಲ್ಪಟ್ಟ ಲೋಕಲ್‌ಸೆಸ್ ದೇಖೀಲ್ ಅಂತಾ ಇಜಾರೆ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇತಿಂಗಳ 15ನೇ ತಾರೀಖಿನಲ್ಲಾಗಲಿ, ಅದಕ್ಕೆ ಮುಂದಾಗಿಯಾಗಲಿ ಡಿಸ್ಟ್ರಿಕ್ಟ್ ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕೀಗಳಿಗೂ ಸೇಕಡಾ ಸಾಲೀಯಾನಾ 6ರ ಪಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗುಗಳು ಪಾವತೀಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ್ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲಿ ಜಾರೀ ಇರುವ ರೂಲ್ಸ್‌ನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತಿನ ಜಪ್ತೀ ಹರಾಜ್ ಮೂಲಕ ವಸೂಲ್ಮಾಡಲ್ಪಡತಕ್ಕದ್ದು, ಮತ್ತು ಎಕ್ಸೈಜ್ ಕಮಿಷನರವರ ಮೂಲಕ ದಿವಾನರವರ ಮಂಜೂರಾತಿಯನ್ನು ಪಡೆದು ಇಜಾರೆ ರದ್ದಾಗಿರುತ್ತೆಂದು ತಿಳಿಸುವದಕ್ಕೂ ಅದನ್ನು ಮರಳಿ ಹರಾಜ್ ಹಾಕುವದಕ್ಕೂ ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ ಬಡ್ಡಿ ದೇಖೀಲ್ ತಮಾಂ ಬಾಕೀಗಳನ್ನು ಹಾಗೆ ಇಜಾರೆ ಪುನಷ್ಚ ಹರಾಜ್ ಹಾಕುವದರಿಂದಾಗಲಿ ಇತರವಿಲೇ ಮಾಡುವದರಿಂದಾಗಲಿ ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನೀ ಮೊಬಲಗ್ ಸರಕಾರಕ್ಕೆ ಶೇರಿಸಿಕೊಳ್ಳುವದರ ಮೂಲಕವಾಗಿಯೂ ಜರೂರಿದ್ದಲ್ಲಿ ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕಿ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಪ್ತೀ ಹರಾಜ್‌ಮೂಲಕ ವಸೂಲ್ ಮಾಡುವದಕ್ಕೂ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರೀ ಇರತಕ್ಕದ್ದು.

II. ಚಿಲ್ಲರೆ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸ್‌ಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿಯಿಲ್ಲದೆ ಇಜಾರೇದಾರನು ಹಾಲಿ ಶೇಂದಿ ಪುರೋಖ್ತುಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ, ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ, ಮತ್ತು ಇಜಾರೇದಾರನು ಆಬಗ್ಯಾಗಿ ಯಾವ ಈಡು ಮೊಬಲಗನ್ನೂ ಕೇಳಕೂಡದು.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ ತೆಗೆದುಕೊಳ್ಳಕೂಡದು.

IV. ಇಜಾರೇದಾರನು ಮೈಸೂರು ಗವರ್ನಮೆಂಟಿನಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ ಬದ್ಧನಾಗಿ ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ ತಮ್ಮ ಗ್ರಾಮಗಳ ಸರಹದ್ದುಗಳೊಳಗೆ ಅಂತಾ ಹಕ್ಕುದಾರಿಗಳನ್ನು ಚಲಾಯಿಸಲಿಕ್ಕೆ ಸನ್ನದ ವಗೈರೇಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾಯಂಗುತ್ತಾ ಗ್ರಾಮಗಳ ಹಿಡುವಳೀದಾರು) ಹಕ್ಕುದಾರೀಗಳನ್ನು ಶೇಂದೀ ಹುಟ್ಟುವಳಿ ವಿಷಯದಲ್ಲಿ ಚಲಾಯಿಸಲಿಕ್ಕೆ ಇಜಾರೇದಾರನಿಗೆ ಸಂಪೂರ್ಣ ಸ್ವಾತಂತ್ರ್ಯ ಉಂಟಾಗಿರತಕ್ಕದ್ದು. ಶೇಂದೀ ಹುಟ್ಟುವಳೀ ಬಾಬಿನಲ್ಲಿ ಇಜಾರೇದಾರನು ಇನಾಂದಾರನ ಹಕ್ಕುದಾರಿಯನ್ನು ಚಲಾಯಿಸಿ ಇರಲಿ ಅಥವಾ ಚಲಾಯಿಸದೇ ಇರಲಿ ಶೇಂದೀ ಹುಟ್ಟುವಳೀಯನ್ನು ಇಜಾರೇದಾರನು ಇನಾಂದಾರನಿಗೆ ಸಲ್ಲಿಸತಕ್ಕದ್ದು. ಅಂಥಾ ಹುಟ್ಟುವಳೀ ಮೊಬಲಗು ಅವರವರುಗಳಲ್ಲಿ ವಿಶೇಷವಾದ ವಡಂಬಡಿಕೆ ಉಂಟಾಗಿದ್ದಹೊರ್ತು ಜಾರೀಲಿರುವ ರೂಲ್ಸ್ ಅನುಸರಿಸಿ ಮೊಕರರು ಮಾಡಲ್ಪಡತಕ್ಕದ್ದು. ಆ ಬಗ್ಯೆ ರೂಲ್ಸ್ ಇಲ್ಲದೆ ಇದ್ದಪಕ್ಷದಲ್ಲಿ ಮಾಮೂಲ್ ಅನುಸರಿಸಿ ಮೊಕರರು ಮಾಡಲ್ಪಡತಕ್ಕದ್ದು. ಶೇಂದೀ ಹುಟ್ಟುವಳೀ ಹಕ್ಕುದಾರೀ ವಿಷಯದಲ್ಲಾಗಲಿ ಅಥವಾ ಇಜಾರೇದಾರನಿಂದ ಇನಾಂದಾರನಿಗೆ ಸಲ್ಲಬೇಕಾಗುವ ಶೇಂದೀ ಹುಟ್ಟುವಳೀ ಮೊಬಲಗಿನ ವಿಷಯದಲ್ಲಾಗಲಿ ಇಜಾರೇದಾರನಿಗೂ ಇನಾಂದಾರನಿಗೂ ಪರಸ್ಪರ ತಕರಾರು ಉಂಟಾದಪಕ್ಷದಲ್ಲಿ ಆ ಪೈಕೀ ಯಾರೇಆಗಲಿ ಡೆಪ್ಯುಟಿ ಕಮ್ಮಿಷನರವರ ಬಳಿ ಫಿರ್ಯಾದು ಮಾಡಿದಾಗ ಅಂಥಾ ಫಿರ್ಯಾದನ್ನು ಡೆಪ್ಯುಟಿ ಕಮ್ಮಿಷನರು ಯುಕ್ತ ಮತ್ತು ನ್ಯಾಯ್ಯವಿದ್ದಂತೆ ಫೈಸಲ್ ಮಾಡಲಿಕ್ಕೆ ಅರ್ಹರಾಗಿರತಕ್ಕದ್ದು. ಅಂಥಾ ಫೈಸಲಿಗೆ ಇಜಾರೇದಾರನು ಬದ್ಧನಾಗಿರತಕ್ಕದ್ದು. ಪರಂತು ಸದರೀ ಫೈಸಲು ಅಪ್ಪೀಲ್‌ನಲ್ಲಿ ಗವರ್ನಮೆಂಟಿನವರಿಂದ ಖಾಯಂ ಮಾಡಲ್ಪಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗಿರತಕ್ಕದ್ದು. ಡೆಪ್ಯುಟಿ ಕಮ್ಮಿಷನರವರ ಅಂಥಾ ಫೈಸಲಾತಿಯಲ್ಲಾಗಲಿ ಅಥವಾ ಗವರ್ನಮೆಂಟಿನವರಿಂದ ಅಪ್ಪೀಲಿನಲ್ಲಾಗಲಿ ಸಲಾಯಿಸಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗುಗಳು ಜಮೀನ್ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸಿಗೆ ಅನುಸಾರವಾಗಿ ಯಿಜಾರೇದಾರನಿಂದ ವಸೂಲ್ಮಾಡಲ್ಪಡತಕ್ಕದ್ದು.

VI. ಬೆಳಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆಗಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯೂರೋಪಿಯನ್ ಸೋಲ್ಜರುಗಳ ವಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ವಸ್ತೀ ಕ್ಯಾಂಪು ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದಿ ಪುರೋಖು ಬಗ್ಯೆ ಇರುವ ತವಖಾನೆ ಅಂಗಡಿಗಳೂ ಮುಚ್ಚಲ್ಪಡತಕ್ಕದ್ದು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬು ಅಥವಾ ಉಂಟಾಗಬಹುದಾಗಿತ್ತೆಂಬ ನಷ್ಟದ ಬಗ್ಯೆ ಈಡು ಕೊಡುವಂತೆ ಕೇಳಕೂಡದು, ಅಂಥಾ ಪಾಜಿನವರು ತಮ್ಮ ಕಡೇ ಅಬ್ಕಾರಿ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿ ಇರತಕ್ಕದ್ದು.

VIII. ಇಜಾರೇದಾರನು ಸರಕಾರದ ಬಂಜರ ಜಮೀನನಲ್ಲಿ ಇರುವ ಈಚಲ ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಖು ಬಗ್ಯಾಗಲಿ ಜಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿ ಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಐಯಿಂದಾ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕುರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ತಾಲ್ಲೂಕುಗಳಿಗೆ ಶೇಂದೀ ವದಗಿಸುವದಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಸುವಂಥಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕುರುವದಿಲ್ಲ. ಡೆಪ್ಯುಟಿ ಕಮ್ಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ವ ಷರತ್ತುಗಳ ಪ್ರಕಾರ ಮಾತ್ರವೇ ಜಲ್ಲ ತಯಾರ್ ಮಾಡತಕ್ಕದ್ದು.

IX. ಇಜಾರೇದಾರನು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್‌ವಾಕಾ ಲೆಖ್ಖಗಳು ಇಡತಕ್ಕದ್ದು. ಅವುಗಳಲ್ಲಿ, (1) ಶೇಂದಿ ಇಳಿಸಲ್ಪಟ್ಟ ಶೇಂದಿ ತೋಪುಗಳ ಹೆಸರು ಮತ್ತು ಅವುಗಳು ಇರತಕ್ಕ ಸ್ಥಳ, (2) ಶೇಂದಿಕಟ್ಟಿದ ಮರಗಳ ಸಂಖ್ಯೆ, (3) ರೋಜೇನಾ ಉತಾರ್ ಮಾಡಲ್ಪಟ್ಟ ಶೇಂದಿ ತೇದಾದು, (4) ರೋಜೇನಾ ಬಿಕರೀಮಾಡಲ್ಪಟ್ಟ ಶೇಂದಿಯ ತೇದಾದು, ಮತ್ತು (5) ಶೇಂದಿಯುಸರಬರಾಯಿ ಮಾಡಲ್ಪಟ್ಟ ದುಕಾನುಗಳಹೆಸರು; ಈಬಾಬತುತಪಶೀಲುಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್‌ದಾರರಿಂದಾಗಲೀ ಯಾ ಆಬಗ್ಯಾಗಿ ಡೆಪ್ಯುಟಿ ಕಮ್ಮಿಷನರಿಂದ ಮೊಕರರ್ ಮಾಡಲ್ಪಟ್ಟ ಇತರ ಯಾವ ಆಫೀಸರಿಂದಾಗಲೀ ತನಿಖೆ ನೋಡಲ್ಪಡುವ ಬಗ್ಯೆ ಖುಲ್ಲಾ ಇರತಕ್ಕದ್ದು, ಮತ್ತು ಇವುಗಳ ನಕಲು ಡೆಪ್ಯುಟಿ ಕಮ್ಮಿಷನರಿಂದಾಗಲಿ ಅಮಲ್‌ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಗವರ್ನಮೆಂಟಿನವರಿಂದ ವಿಧಿಸಲ್ಪಡುವಂಥಾ ನಮೂನೆಯಲ್ಲಿ ಇಜಾರೇದಾರನಿಂದ ಹಾಜರ್ಮಾಡಲ್ಪಡತಕ್ಕದ್ದು.

X. ಬೀಯರ್ ಸಾರಾಯಿ ವಿಷಯದಲ್ಲಾಗಲಿ, ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗಳಿಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ನೋಡ್ಕೀಗೆ ಬಾಧ್ಯತೆಉಳ್ಳವನಾಗಿರುವದಿಲ್ಲ. ತಾಲ್ಲೂಕು ಪೈಕೀ ಯಾವ ಭಾಗದಲ್ಲಾಗಲಿ, ಸರ್ಕಾರೀ ಕಾರಣಗಳ ಮೇಲೆಇಜಾರಯನ್ನು ಮೌಕೂಫ್ ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

XI. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯುರೇಷಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವನಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಖಿಲಾಫಾಗಲಿ ನಡೆದಲ್ಲಿ ಅದರಿಂದ ಗುತ್ತಿಗೆದಾರನು ಯಾ ಪುರೋಖುದಾರ, ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಬಿಕರೀದಾರನ ಲೈಸೆನ್ಸು ರದ್ದಾಗಲಿಕ್ಕೂ ಗುರಿಯಾಗುತ್ತೆ.

XII. ಇಜಾರೇದಾರನು, ತನ್ನ ನೌಕರರು ಯಾ ಮುತಾಲೀಕರು, ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಎತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಎಳ್ಳೇ ಈಚಲು ಮರಗಳಿಂದ ಶೇಂದೀ ಇಳಿಸದೇಯೂ, ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಮತ್ತು ಯಾವ ಗಿಡಗಳನ್ನೇ ಆಗಲೀ ಅವು ಸತ್ತು ಹೋಗುವಂತೆ ಅಜಾಗ್ರತೆಯಾಗಿ ಕಟ್ಟಕೂಡದು. ಈ ನಿಬಂಧನೆಗಳಿಗೆ ಏನಾದರೂ ಬರಖಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗತಕ್ಕದ್ದು.

XIII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

ಸೇರು ಬಂದಕ್ಕೆ ಕ್ರಯ.

	ಜಾಸ್ತಿ. ರೂ. ಆ. ಪೈ.	ಕಮ್ಮಿ. ರೂ. ಆ. ಪೈ.
ಶಿವಮೊಗ್ಗಾ ಟೌನ್	0 1 6	0 1 0
ಚನ್ನಗಿರಿ ಮತ್ತು ಹೊನ್ನಾಳಿ ತಾಲ್ಲೂಕುಗಳು	0 1 0	0 0 6
ಡಿಸ್ಟ್ರಿಕ್ಟಿನ ಇತರಭಾಗಗಳಲ್ಲಿ.	0 1 6	0 0 6

6. ಶೇಂದಿ ಸಾಗಿಸುವಬಗ್ಗೆ ಉಪಯೋಗಿಸಲ್ಪಡುವ ಭಂಡಿಗಳಿಗಾಗಿ, ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದಾ ವಿನಾಯಿಸಲ್ಪಟ್ಟಿರುವದಿಲ್ಲ.

7. 1886—87ನೇ ಇಸವೀ ಲಾಗಾಯತು ಡಿಸ್ಟ್ರಿಕ್ಟು ಮುಳೆ ಸಾಲವಾರ್ ಹುಟ್ಟುವಳೀ ಇದರಡೀ ನಮೂದಿಸಿ ರುತ್ತೆ. ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನೂ, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳಿದುಕೊಳ್ಳಬಹುದು.

				ರೂ.
1886—87	..	..	..	13,060.
1887—88	..	..	..	14,215.
1888—89	..	..	..	14,215.
1889—90	..	..	..	14,215.

ಕಡೂರು ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟಿನಲ್ಲಿ 1890ನೇ ಇಸವಿ ಯೇಪ್ರೆಲ್ ಗುರ್ರೇಲಾಗಾಯಿತು 1892ನೇ ಇಸವಿ ಮಾರ್ಚಿ 31ನೇ ತಾರೀಖು ವರಿವಿಗೆ ಆಗುವ 2 ಸಂವತ್ಸರಗಳ ಕಾಲಪರ್ಯಂತ ಶೇಂದೀ ಇಜಾರೆ ಯಾ ಶೇಂದಿ ಬಿಕರೀ ಮಾಡುವ ಒಟ್ಟು ಸ್ವಾತಂತ್ರ್ಯವು ತಾಲ್ಲೂಕ್ವಾರಾಗಲಿ, ಅನೇಕ ತಾಲ್ಲೂಕುಗಳ ಸೇರಿಕೆಯಾಗಿಯಾಗಲಿ ಇದರ ಮುಂದೆ ತಿಳಿಸಲ್ಪಡುವ ಷರತ್ತುಗಳಿಗೆ ಒಳಪಟ್ಟು 1890ನೇ ಇಸವಿ ಮಾರ್ಚಿ 7ನೇ ತಾರೀಖಿನ ಮಧ್ಯಾನ್ಹ 12 ಘಂಟೆಗೆ ಚಿಕ್ಕಮಗಳೂರು ಮೊಕ್ಕಾಂನಲ್ಲಿ ಕಡೂರ್ ಡೆಪ್ಯುಟಿ ಕಮ್ಮಿಷ್ನರವರಿಂದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ. ಇಜಾರೆಯು ಮೇಲ್ಕಂಡ 2 ವರುಷಗಳ ಕಾಲದಲ್ಲಿ ಮಲ್‌ನಾಡ್ ತಾಲ್ಲೂಕುಗಳಲ್ಲಿ ಬಗನಿ ಶೇಂದಿಯನ್ನ ಪುರೋಖ್ತು ಮಾಡುವ ಸ್ವಾತಂತ್ರ್ಯವನ್ನು ಅಡಗಿಸಿಕ್ಕೊಂಡಿರುವದಿಲ್ಲ. ಸದರಿ ಬಗನೀ ಶೇಂದಿ ಪುರೋಖ್ತು ಮಾಡುವ ಸ್ವಾತಂತ್ರ್ಯವು ಗ್ರಾಮವಾರಾಗಲಿ ಅನೇಕ ಗ್ರಾಮಗಳು ಶೇರಿಯಾಗಲಿ ಅಲಾಯಿದಾ ಇಜಾರೆಗೆ ಕೊಡಲ್ಪಡುವದು. ಕಡೂರು ಡಿಸ್ಟ್ರಿಕ್ಟಿಗೆ ಇದರಡಿ ಕಂಡ ತಾಲ್ಲೂಕುಗಳು ಶೇರಿರುತ್ತವೆ.

1	ಚಿಕ್ಕಮಗಳೂರು ತಾ ||	4	ತರೀಕೆರೆ ತಾ ||
2	ಕಡೂರು ”	5	ಕೊಪ್ಪ, ಯಡೇಹಳ್ಳಿ ಡೆ|| ಅಮಲ್‌ದಾರ್ರ ಚಾರ್ಜಿ ದೇಖೀಲ್
3	ಮೂಡಿಗೆರೆ ”		

2. ಪ್ರತಿ ಸಂದರ್ಭದೊಳಗೂ ಇಜಾರೆಯು, ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾಗುವ ಸರಕಾರದ ಸವಾಲಿಗೆ ಮೇಲ್ಪಟ್ಟು ಬರತಕ್ಕ ಚಡ ದರಖಾಸ್ತುದಾರರಿಗೆ ಹರಾಜುಮೂಲಕ ದಿವಾನರವರ ಮಂಜೂರಾತಿಗೆ ವಳಪಟ್ಟು ವಿಕ್ರಯಿಸಲ್ಪಡುವದು, ಸದರೀ ಸಾಲಿಯಾನಾ ಹುಟ್ಟುವಳಿ ಸಂಗತಿ ಹರಾಜು ಕಾಲದಲ್ಲಿ ಘಾಯಿಷ್ ಮಾಡಲ್ಪಡುತ್ತೆ. ಚಡ ದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ ಯಾವ ಸಬಬನ್ನೂ ತಿಳಿಸದೆಯೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ಕಾಸಿಕೊಂಡಿರುತ್ತಾರೆ.

3. ದರಖಾಸ್ತು ಮಾಡತಕ್ಕವರು, ಖುದ್ದಾಗಿಯಾಗಲಿ ಕ್ರಮ ಪ್ರಕಾರ ಮೊಕರರ್ ಮಾಡಲ್ಪಟ್ಟ ಮುತಾಲೀಕರ ಮೂಲಕವಾಗಿ ಯಾಗಲಿ ಹಾಜರಾಗತಕ್ಕದ್ದು. ಸಾಲಿಯಾನಾ ಹುಟ್ಟುವಳಿ ಮೇಲೆ ಗೊತ್ತಾದ ಸರಕಾರದ ಸವಾಲಿನ ಮೊಬಲಗಿನಮೇಲೆ ಶೇಕಡಾ 5ರ ಪ್ರಕಾರ ಆಗುವ ಮೊಬಲಗು ಡಿಪಾಜಿಟ್ ಇಡಲ್ಪಡುವ ತನಕ ಯಾವ ಮನುಷ್ಯನೂ ದರಖಾಸ್ತು ಮಾಡತಕ್ಕದ್ದಲ್ಲ. ತಿರಸ್ಕರಿಸಲ್ಪಟ್ಟ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್ ಮೊಬಲಗು ಹರಾಜ್ ಆಖೈರ್ ಕಾಲದಲ್ಲಿ ಅವರಿಗೆ ವಾಪಸ್ ಪಾವತೀ ಮಾಡಲ್ಪಡುವದು.

4. ಯಾವ ಚಡ ದರಖಾಸ್ತುದಾರನ ದರಖಾಸ್ತು ಯಕ್ಸೈಜ್ ಕಮ್ಮಿಷನರದ್ವಾರಾ ದಿವಾನರವರ ಮಂಜೂರಾತಿ ಬಗ್ಗೆ ಚುನಾಯಿಸಿಕೊಳ್ಳಲ್ಪಡುತ್ತೋ ಅಂಥಾ ಚಡ ದರಖಾಸ್ತುದಾರನು ಮೊದಲೇ ಡಿಪಾಜಿಟ್ ಇಟ್ಟಿರುವ ಮೊಬಲಗು ದೇಖೀಲ್ ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೆ ಮೊಬಲಗು ಪೈಕಿ ಹನ್ನೆರಡರಲ್ಲಿ ಒಂದು ಭಾಗಕ್ಕೆ ಸಮನಾದ ಮೊಬಲಗನ್ನು ಕೂಡ್ಲೆ ಠೇವಣಿ ಇಡತಕ್ಕದ್ದು. ಆತನು ದಿವಾನರವರ ತೀರ್ಮಾನ ತಿಳಸಲ್ಪಟ್ಟ ತರುವಾಯು ಎಂಟು ದಿನಗಳೊಳಗಾಗಿ ಪೂರ್ವ ಡಿಪಾಜಿಟ್ ಇಟ್ಟಿರುವ ಮೊಬಲಗುಗಳು ದೇಖೀಲ್, ದರಖಾಸ್ತು ಮಾಡಲ್ಪಟ್ಟ ಸಾಲಿಯಾನಾ ಇಜಾರೇ ಮೊಬಲಗು ಪೈಕಿ ಹಾಗಪಾಲಿಗೆ ಸಮನಾಗಿರುವ ಒಂದು ಮೊಬಲಗನ್ನು ಇಜಾರೆ ಷರತ್ತುಗಳಂತೆ ಕ್ರಮ ಪ್ರಕಾರ ನಡದುಕೊಳ್ಳುವ ಬಗ್ಗೆ ಜಾಮೀನಿ ತರೀಕ್ ನಗದಾಗಿಯಾಗಲೀ ಕ್ರಮ ಪ್ರಕಾರ ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರಮೆಂಟ್ ಪತ್ರಗಳ ಮೂಲಕವಾಗಲಿ, ಡೆಪ್ಯುಟಿ ಕಮಿಷ್ನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಅಥವಾ ದರಖಾಸ್ತುದಾರನು ಮೇಲೆ ಹೇಳಿದ ಜಾಮೀನಿ ಪೈಕೀ ಅರ್ಧ ಭಾಗವನ್ನ ನಗದಾಗಿಯಾಗಲೀ ಹಾಜರ್ಮಾಡಿ ಬಾಕೀ ಅರ್ಧವನ್ನ ಸದರೀ ಮೊಬಲಗ್ಗೆ ಯಾರಡರಷ್ಟು ಕ್ರಯ ಬಾಳುವ ಮತ್ತು ಯಾವ ಭಾಧ್ಯತೆ ದೇಣೆಗಳೂ ಇಲ್ಲದ ಸ್ಥಾವರ ಸ್ವತ್ತಿನ ಮೂಲಕವಾಗಿಯಾಗಲಿ ಹಾಜರ್ಮಾಡತಕ್ಕದ್ದು. ಮತ್ತು ಇದರಲ್ಲಿ ವಿಧಿಸಲ್ಪಟ್ಟ ಷರತಗಳಿಗೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದಮೇಲೆ ಒಂದು ಕರಾರ್ ಬರದುಕೊಡತಕ್ಕದ್ದು.

5. ಆತನು ಹಿಂದಿನ ಕಲಂನಲ್ಲಿ ಕಂಡಂತೆ ಡಿಪಾಜಿಟ ಇಡಲಿಕ್ಕಾಗಲಿ ಅಥವಾಅಪೇಕ್ಷಿಸಲ್ಪಟ್ಟ ಕರಾರು ಬರದುಕೊಡಲಿಕ್ಕೆ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟಗಳು, ಗವರ್ನಮೆಂಟಿಗೆ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು ಪುನಃ ಹರಾಜು ಮಾಡಲ್ಪಡುವದು ಯಾ ಅನ್ಯಥಾ ವಿಲಾ ಮಾಡಲ್ಪಡುವದು. ಹಾಗೆ ಪುನಃ ಹರಾಜು ಮಾಡುವದರಿಂದ ಯಾ ಇತರ ವಿಧವಾಗಿ ವಿಲಾ ಮಾಡುವದರಿಂದ ವುಂಟಾಗುವ ನಷ್ಟವು ಅವನಿಂದಾ ಜವಿಾನು ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಜಫ್ತೀಹರಾಜಿನಿಂದ ವಸೂಲ್ಮಾಡಲ್ಪಡುವದು.

ಷರತ್ತುಗಳು.

I. ಸಾಲಿಯಾನಾ ಇಜಾರೇ ಮೊಬಲಗಿನ ಮೇಲೆ ರೂಪಾಯಿಗೆ ಬಂದಾಣೇ ಪ್ರಕಾರ ಆಗುವ ವಿಧಿಸಲ್ಪಟ್ಟ ಲೋಕಲ್ ಸೆಸ ದೇಖೀಲ್ ಅಂತಾ ಇಜಾರೇ ಮೊಬಲಗು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇತಾರೀಖಿನಲ್ಲಾಗಲಿ ಅದಕ್ಕೆ ಮುಂದಾಗಿಯಾಗಲಿ, ಡಿಸ್ಟ್ರಿಕ್ಟ ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡತಕ್ಕದ್ದು. ಸದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ, ಶೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ಕೊಡತಕ್ಕದ್ದು. ಅಂತಾ ಬಾಕೀ ಮೊಬಲಗಗಳು ಪಾವತಿಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜವಿಾನ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತು ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಯಕ್ಸೈಜ್ ಕಮ್ಮಿಷನರ ಮೂಲಕ ದಿವಾನರವರ ಮಂಜೂರಾತಿಯನ್ನು ಪಡೆದು ಇಜಾರೇ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನೀಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕೀಗಳನ್ನೂ, ಹಾಗೆ ಇಜಾರೇ ಪುನಶ್ಚ ಹರಾಜ್ ಹಾಕುವದರಿಂದಾಗಲಿ, ಇತರ ವಿಧವಾಗಿ ವಿಲಾ ಮಾಡುವದರಿಂದಾಗಲಿ, ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾವಿಾನಿ ಮೊಬಲಗ ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಜವಿಾನ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ್ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ, ಡೆಪ್ಯುಟಿ ಕಮ್ಮಿಷನರವರಿಗೆ ಯಿಖ್ತ್ಯಾರಿ ಇರತಕ್ಕದ್ದು.

II. ಚಿಲ್ಲರೇ ಪುರೋಖ್ತುದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದೀ ಪುರೋಖ್ತು ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖೆಯ ವಿಷಯದಲ್ಲಾಗಲಿ ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬುಗಳಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೇದಾರನು ಆ ಬಗ್ಯಾಗಿ ಯಾವ ಈಡು ಮೊಬಲಗನ್ನಾಗಲಿ ಕೇಳುವದಕ್ಕೆ ಹಕ್ಕುದಾರನಾಗಿರುವದಿಲ್ಲ.

III. ಶೇಂದೀಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆ ಇತರ ಸ್ವತ್ತನ್ನಾಗಲಿ ತೆಗದುಕೊಳ್ಳಕೂಡದು.

IV. ಇಜಾರೇದಾರನು, ಗೌರ್ನಮೆಂಟನವರಿಂದಾ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ, ಬಧ್ಧನಾಗಿ, ನಡದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ ತಮ್ಮ ಗ್ರಾಮ ಸರಹದ್ದುಗಳೊಳಗೆ ಶೇಂದಿ ಹುಟ್ಟುವಳಿ ವಿಷಯವಾಗಿ ಹಕ್ಕುದಾರಿಗಳನ್ನು ಚಲಾಯಿಸಲಿಕ್ಕೆ ಸನ್ನದು ವಗ್ಯೆರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ ಸರ್ವಮಾನ್ಯ ಕಾಯಂ ಗುತ್ತಾ ಗ್ರಾಮಗಳ ಹಿಡುವಳಿದಾರ್ರ ಹಕ್ಕದಾರೀಯನ್ನೇ ಚಲಾಯಿಸಲಿಕ್ಕೆ ಇಜಾರೇದಾರನಿಗೆ ಸಂಪೂರ್ಣ ಸ್ವಾತಂತ್ರ್ಯ ಉಂಟಾಗಿರತಕ್ಕದ್ದು. ಶೇಂದೀ ಹುಟ್ಟುವಳೀ ಬಾಬಿನಲ್ಲಿ ಇಜಾರೇದಾರನು ಇನಾಂದಾರನ ಹಕ್ಕದಾರಿಯನ್ನ ಚಲಾಯಿಸಿರಲೀ ಅಥವಾ ಚಲಾಯಿಸದೇಯಿರಲಿ, ಶೇಂದೀ ಹುಟ್ಟುವಳೀಯನ್ನ ಇಜಾರೇದಾರನು ಇನಾಂದಾರನಿಗೆ ಸಲ್ಲಿಸತಕ್ಕದ್ದು. ಅಂತಾ ಹುಟುವಳಿ ಮೊಬಲಗು ಅವರವರುಗಳಲ್ಲಿ ವಿಶೇಷವಾದ ಒಡಂಬಡಿಕೆ ಉಂಟಾಗಿದ್ದರೆ ಹೊರ್ತು, ಜಾರೀಲ್ಲಿರುವ ರೂಲ್ಸ ಅನುಸರಿಸಿ ಮೊಕರರ್ಮಾಡಲ್ಪಡತಕ್ಕದ್ದು, ಆ ಬಗ್ಯೆ ರೂಲ್ಸ ಇಲ್ಲದೇಯಿದ್ದ ಪಕ್ಷದಲ್ಲಿ ಮಾಮೂಲ್ ಅನುಸರಿಸಿ ಮೊಕರರ್ಮಾಡತಕ್ಕದ್ದು, ಶೇಂದಿ ಹುಟ್ಟುವಳೀ ವಿಷಯದಲ್ಲಾಗಲಿ, ಅಥವಾ ಇಜಾರೇದಾರನಿಂದ ಇನಾಂದಾರನಿಗೆ ಸಲ್ಲಬೇಕಾಗುವ ಶೇಂದಿ ಹುಟುವಳೀ ಮೊಬಲಗಿನ ವಿಷಯದಲ್ಲಾಗಲಿ, ಇಜಾರೇದಾರನಿಗೂ ಇನಾಂದಾರನಿಗೂ ಪರಸ್ಪರ ತಕರಾರ್ ಉಂಟಾದ ಪಕ್ಷದಲ್ಲಿ, ಆ ಪೈಕಿ ಯಾರೇಯಾಗಲಿ ಡೆಪ್ಯುಟಿ ಕಮಿಷನರ ಬಳಿಗೆ ಫಿರ್ಯಾದ್ ಮಾಡಿದಾಗ ಅಂತಾ ಫಿರ್ಯಾದನ್ನು ಡೆಪ್ಯುಟಿ ಕಮಿಷನರು ಯುಕ್ತ ಮತ್ತು ನ್ಯಾಯುವಿದ್ದಂತೆ ಫೈಸಲ್ ಮಾಡತಕ್ಕದ್ದು, ಅಂತಾ ಫೈಸಲಿಗೆ ಇಜಾರೇದಾರನು ಬದ್ಧನಾಗಿರತಕ್ಕದ್ದು. ಪರಂತು, ಸದರೀ ಫೈಸಲು ಅಪ್ಪೀಲಿನಲ್ಲಿ ಗವರ್ನಮೆಂಟನವರಿಂದ ಕಾಯಂ ಮಾಡಲಿಕ್ಕಾಗಲಿ ಅನ್ಯಥಾ ಆಗಲಿ ಗುರಿಯಾಗಿರತಕ್ಕದ್ದು, ಡೆಪ್ಯುಟಿ ಕಮ್ಮಿಷನವರಿಂದ ಅಂತಾ ತೀರ್ಪಿನಲ್ಲಾಗಲಿ ಅಥವಾ ಗವರ್ನಮೆಂಟನವರಿಂದ ಅಪ್ಪೀಲ್ನಲ್ಲಾಗಲಿ ಪಾವತೀ ಮಾಡಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗು ಜವಿಾನ ಕಂದಾಯದ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸ ಅನುಸರಿಸಿ ಇಜಾರೇದಾರರಿಂದ ವಸೂಲ್ ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದಿ ಅಂಗಡಿಗಳ್ಯಾವವೂ ತೆರಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ, ಡೆಪ್ಯುಟಿ ಕಮ್ಮಿಷನರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕವು.

VII. ಯುರೋಪಿಯನ್ ಸೋಲ್ಜರುಗಳ ಒಂದು ರಿಜಮೆಂಟ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆ ಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದೀ ಪುರೋಖ್ತು ಬಗ್ಗೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕವು, ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟುಮಾಡಲ್ಪಟ್ಟಿತೆಂಬ ನಷ್ಟದ ಬಗ್ಗೆ ಈಡು ಕೊಡುವಂತೆ ಕೇಳಕೂಡದು; ಅಂಥಾ ಘಾಜಿನವರು ತಮ್ಮ ಕಡೇ ಆಬ್ಕಾರೀ ಕಂಟ್ರಾಕ್ಟರನ್ನ ಇಟ್ಟುಕೊಳ್ಳುವದು ಅವರಿಗೆ ನ್ಯಾಯವಾಗಿರತಕ್ಕದ್ದು.

VIII. ಇಜಾರೇದಾರನು ಸರಕಾರದ ಬಂಜರ ಜಮೀನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಪುರೋಖ್ತು ಬಗ್ಯಾಗಲಿ ಬೆಲ್ಲ ತಯಾರ ಮಾಡುವ ಬಗ್ಯಾಗಲಿ ಶೇಂದೀ ಇಳಿಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು, ಪರಂತು ಸಾಗುವಳಿಗೋಸ್ಕರವಾಗಲಿ ಇತರ ಕಾರ್ಯಕ್ಕಾಗಲಿ ಈಗ ಅನುಭವಿಸಲ್ಪಡುವ ಅಥವಾ ಖಯಿಂದ ಅನುಭವಿಸಲ್ಪಡತಕ್ಕ ಜಮೀನುಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕಿರುವದಿಲ್ಲ, ಮತ್ತು ಗವರ್ನಮೆಂಟಿನವರು ಯಾವಾಗಲಾದರೂ, ಇತರ ಕೆಲಸಗಳಿಗೋಸ್ಕರವಾಗಲಿ ಇತರ ತಾಲ್ಲೂಕುಗಳಿಗೆ ಶೇಂದಿ ಒದಗಿಸುವದಕ್ಕೋಸ್ಕರವಾಗಲಿ, ಉಳಿಸಿಕ್ಕೊಳ್ಳುವದು ಜರೂರೆಂದು ಭಾವಿಸುವಂತಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತೋಪುಗಳಿಗಾಗಿಯಾಗಲಿ, ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ, ಡೆಪ್ಯುಟಿ ಕಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗಳಲ್ಲೂ, ಷರತುಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರುಮಾಡಲ್ಪಡತಕ್ಕದ್ದು.

IX. ಇಜಾರೇದಾರನು ಪ್ರತಿ ತಾಲ್ಲೂಕಿಗೂ ಸಾಚಾ ಮತ್ತು ಕರಾರ್ವಾಕಾ ಲೆಖ್ಖಗಳು ಇಡತಕ್ಕದ್ದು. ಅವುಗಳಲ್ಲಿ (1) ಶೇಂದಿ ಇಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರು ಮತ್ತು ಅವುಗಳಿರತಕ್ಕ ಸ್ಥಳ, (2) ಶೇಂದೀ ಕಟ್ಟಿದ ಮರಗಳ ಸಂಖ್ಯೆ, (3) ರೋಜೀನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದ್, (4) ರೋಜೀನಾ ಬಿಕರೀ ಮಾಡಲ್ಪಟ್ಟ ಶೇಂದಿಯ ತೇದಾದ್ ಮತ್ತು (5) ಶೇಂದಿಯೂ ಸರಬರಾಯಿಮಾಡಲ್ಪಟ್ಟ ದುಕಾನುಗಳ ಹೆಸರು; ಈ ಬಾಬತು ತಪಶೀಲ್‌ಗಳು ತೋರಿಸಲ್ಪಡತಕ್ಕದ್ದು. ಈ ಬಾಬತು ಲೆಖ್ಖಗಳು ಅಮಲ್‌ದಾರರಿಂದಾಗಲಿ ಈ ಬಗ್ಯಾಗಿ ಡೆ|| ಕಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಯಾವ ಆಫಿಸರರಿಂದಾಗಲಿ ತನಿಖೆ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕದ್ದು. ಮತ್ತು ಇವುಗಳ ನಕಲು ಡೆ|| ಕಮಿಷನರವರಿಂದಲಾಗಲಿ ಅಮಲ್‌ದಾರನಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಗೌರ್ನಮೆಂಟಿನವರಿಂದಾ ವಿಧಿಸಲ್ಪಡಬಹುದಾದಂತಾ ನಮೂನೆಯಲ್ಲಿ ಇಜಾರೇದಾರರಿಂದ ಹಾಜರ್ಮಾಡಲ್ಪಡತಕ್ಕದ್ದು.

X. ಬಿಯರ್ ಸಾರಾಯಿ ವಿಷಯದಲ್ಲಾಗಲಿ ಶೇಂದಿ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಏರ್ಪಾಡುಗೋಸ್ಕರವೂ ಇಜಾರೇದಾರನು, ಈಡಿಗೆ ಯಾ ಸೋಡೀಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ತಾಲ್ಲೂಕು ಪೈಕೀ ಯಾವ ಭಾಗದಲ್ಲಾಗಲಿ ಸರ್ಕಾರೀ ಕಾರಣಗಳಮೇಲೆ ಇಜಾರೆಯನ್ನು ಮವಕೂಫ್‌ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

XI. ಯಾವ ಯೂರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಜಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಶಿಪಾಯಿಗಾಗಲಿ, ಪೋಲೀಸಿನವನಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು, ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರ್‌ಕಿಲಾಫಾಗಲಿ ನಡೆದಲ್ಲಿ ಅದರಿಂದ ಇಜಾರೇದಾರ ಯಾ ಬಿಕರೀದಾರ, ಪ್ರತ್ಯೇಕವಾಗಿ ಯಾ ಸಮುಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ, ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ, ನೂರು ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಬಿಕರೀದಾರನ ಲೈಸೆನ್ಸು ರದ್ದಾಗಲಿಕ್ಕೆ ಗುರಿಯಾಗುತ್ತೆ.

XII. ಗುತ್ತಿಗೇದಾರನು ತನ್ನ ನವುಕರರು ಯಾ ಮುಲಾಜೀಕರು ಭೂಮಿಯಿಂದ ಗರೀ ಬಿಡುವ ಭಾಗದವರಿಗೆ ಒಂದು ಗಜದ ಯುತ್ತರಕ್ಕಿಂತ ಕಡಮೆಯಾದ ಬುಡಭಾಗಗಳುಳ್ಳ ಯಳೇ ಈಚಲು ಮರಗಳಿಂದ ಶೇಂದೀ ಇಳಿಸದೆಯೂ, ಮತ್ತು ಶೇಂದೀ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ವುಪಯೋಗಿಸದೆಯೂ, ಇರುವ ಬಗ್ಯೆ ಜವಾಬುದಾರನಾಗಿರತಕ್ಕದ್ದು. ಮತ್ತು ಯಾವಗಿಡಗಳನ್ನೆ ಆಗಲಿ ಅವು ಸತ್ತು ಹೋಗುವಂತೆ ಅಜಾಗ್ರತೆಯಾಗಿ ಕಟ್ಟಕೂಡದು. ಈ ನಿಬಂಧನೆಗಳಿಗೆ ಏನಾದರೂ ಬರ್‌ಕಿಲಾಫ್ ನಡೆದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೆದಾರನೂ ಗುರಿಯಾಗಿರತಕ್ಕದ್ದು.

XIII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು.

ಶೇರು ಒಂದಕ್ಕೆ ಕ್ರಯ.

	ಜಾಸ್ತಿ. ರೂ. ಆ. ಪೈ.	ಕಮ್ಮಿ. ರೂ. ಆ. ಪೈ.
ತಾಲ್ಲೂಕು ಕಸಬೆಗಳಲ್ಲಿ	0—1—4	0—0—6
ಗ್ರಾಮಾಂತರಗಳಲ್ಲಿ	0—1—0	0—0—6

6. ಶೇಂದಿ ಸಾಗಿಸುವಬಗ್ಗೆ ಉಪಯೋಗಿಸಲ್ಪಡುವ ಭಂಡಿಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಭಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲಾ.

7. 1886ನೇ ಇಸವಿ ಲಾಗಾಯಿತು ಡಿಸ್ಟ್ರಿಕ್ಟು ಮುಳೆ ಸಾಲಿಯಾನಾ ಶೇಂದಿ ಹುಟ್ಟುವಳಿ ಇದರಡಿ ನಮೂದಿಸಿರುತ್ತೆ, ಇತರ ಯಾವದಾದರೂ ವಿಷಯಗಳನ್ನು ಕುರಿತ ಸಂಗತಿಗಳನ್ನು ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

1886—87	ರೂ.	16,000	1888—89	„	20,000
1887—88	„	20,000	1889—90	„	20,000

ಚಿತ್ರದುರ್ಗ ಡಿಸ್ಟ್ರಿಕ್ಟು.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿ 1890ನೇ ಇಸವಿ ಏಪ್ರೈಲ್ 1ನೇ ತಾರೀಖು ಲಾಗಾಯಿತು 1892ನೇ ಇಸವಿ ಮಾರ್ಚಿ 31ನೇ ತಾರೀಖುವರಿಗೆ ಆಗುವ 2 ವರುಷಗಳ ಕಾಲದ ಪರ್ಯಂತ ಶೇಂದಿ ಬಿಕರೀಮಾಡುವ ಪ್ಪೊಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತುಗಳು ಇದರಿಂದ ಕೋರಲ್ಪಟ್ಟಿರುತ್ತವೆ.

1. ಚಿತ್ರದುರ್ಗ.
2. ಚಳ್ಳಕೆರೆ.
3. ಹಿರಿಯೂರು.
4. ಹೊಳಲ್ಕೆರೆ, ಡೆ||ಅಮಲ್ದಾರ್ ಚಾರ್ಜಿನಲ್ಲಿರುವ ಹೊಸದುರ್ಗ ದೇಖಿಲ್.
5. ದಾವಣಗೆರೆ.
6 ಜಗಲೂರು.
7. ಮೊಳಕಾಲ್ಮುರು.

2. ಪ್ರತಿ ದರಖಾಸ್ತು ದರಖಾಸ್ತುದಾರನ ಇಚ್ಛಾನುಸಾರ ಮೇಲ್ಕಂಡ ತಮಾಂ ತಾಲ್ಲೂಕುಗಳಿಗಾಗಲಿ ಅಥವಾ ಸದರೀ ತಾಲ್ಲೂಕುಗಳಪೈಕೀ ಒಂದು ಯಾ ಹೆಚ್ಚು ತಾಲ್ಲೂಕುಗಳಿಗಾಗಲಿ ಕಳುಹಿಸಲ್ಪಡಬಹುದು.

3. ಪ್ರತಿ ದರಖಾಸ್ತಿನಲ್ಲಿ ಯಾ ದರಖಾಸ್ತು ಮಾಡಲ್ಪಟ್ಟ ತಾಲ್ಲೂಕು ಯಾ ತಾಲ್ಲೂಕುಗಳ ಹೆಸರು ನಮೂದಿಸಲ್ಪಡಬೇಕಾದ್ದಲ್ಲದೆ ಪ್ರತಿ ತಾಲ್ಲೂಕಿಗೂ ಸಾಲಿಯಾನಾ ಕೊಡುವಂತೆ ಒಪ್ಪುವ ಮೊಬಲಗು ನಮೂದಿಸಲ್ಪಟ್ಟು ದರಖಾಸ್ತು ಮಾಡಲ್ಪಟ್ಟ ತಾಲ್ಲೂಕು ವಂದಕ್ಕೆ 100 ರೂಪಾಯಿ ಪ್ರಕಾರ ಆಗುವ ಠೇವಣೀ ಮೊಬಲಗು ಸಹಿತ ಅಡಗಿರತಕ್ಕದ್ದು, ಠೇವಣೀ ಮೊಬಲಗು ನಗದಾಗಿಯಾಗಲಿ, ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ ಕಳುಹಿಸಲ್ಪಡತಕ್ಕದ್ದು.

4. ಪ್ರತಿ ದರಖಾಸ್ತು ಮೊಹರ್ಮಾಡಲ್ಪಟ್ಟ ಲಕ್ಕೋಟೆಯಲ್ಲಿ ಹಾಕಲ್ಪಟ್ಟು "1890ನೇ ಇಸವಿ ಲಾಗಾಯಿತು ಎರಡು ವರುಷಗಳ ಕಾಲ ಪರ್ಯಂತ ಶೇಂದೀ ಬಿಕರೀ ಮಾಡುವ ಪಟ್ಟು ಸ್ವಾತಂತ್ರ್ಯದ ಬಗ್ಗೆ ದರಖಾಸ್ತು" ಎಂಬದಾಗಿ ವಿಳಾಸ ಬರೆಯತಕ್ಕದ್ದು.

5. ದರಖಾಸ್ತುಗಳು, ಸರ್ 1890ನೇ ಇಸವಿ ಮಾರ್ಚಿ 8ನೇ ಮಧ್ಯಾಹ್ನದ ಮಧ್ಯಾಹ್ನದ ವಳಗಾಗಿಯಾಗಲಿ, ತತ್ಪೂರ್ವವಾಗಲಿ, ಚಿತ್ರದುರ್ಗ ಡಿಸ್ಟ್ರಿಕ್ಟು ಡೆಪ್ಯುಟಿ ಕಮ್ಮಿಷನರ್ ಆಫೀಸಿನಲ್ಲಿ ಪಾವತೀ ಮಾಡಲ್ಪಡತಕ್ಕದ್ದು. ಆಗ ಸದರೀ ದರಖಾಸ್ತುಗಳು ದರಖಾಸ್ತುದಾರರ ರೂಬರೂ ಖುಲ್ಲಾ ಮಾಡಲ್ಪಡುವವು. ಯಾವ ದರಖಾಸ್ತುದಾರರ ದರಖಾಸ್ತುಗಳನ್ನು, ಎಕ್ಸೈಜ್ ಕಮ್ಮಿಷನರವರ ದ್ವಾರಾ ದಿವಾನರವರಿಗೆ ಶಿಫಾರಸ್ ಮಾಡುವ ಬಗ್ಗೆ ಡೆಪ್ಯುಟಿ ಕಮ್ಮಿಷನರು ಚುನಾಯಿಸಿಕೊಳ್ಳುತ್ತಾರೋ ಅಂತಾ ದರಖಾಸ್ತುದಾರನು ಕೂಡ್ಲೇ ನಗದಾಗಿಯಾಗಲಿ, ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಕ್ರಮವಾಗಿ ಇಂಡಾರ್ಸ್ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಲಿ ದರಖಾಸ್ತು ಮಾಡಿದ ಸಾಲೀಯಾನಾ ಇಜಾರೇ ಮೊಬಲಗು ಪೈಕೀ ಹನ್ನೆರಡರಲ್ಲಿ ವಂದು ಭಾಗವಾಗಲಿ (ಅಥವಾ ವಂದು ತಿಂಗಳ ಖಿಸ್ತು ಮೊಬಲಗಿಗಾಗಲಿ) ಜಾಸ್ತೀಯಾಗಿ ಡಿಪಾಜಿಟ್ ಇಡತಕ್ಕದ್ದು. ಇದಕ್ಕೆ ತಪ್ಪಿದರೆ ದರಖಾಸ್ತು ಸಂಗಡ ಕಳುಹಿಸಲ್ಪಟ್ಟ ಡಿಪಾಜಿಟ್ ಸರಕಾರಕ್ಕೆ ದಂಡವಾಗಿ ತೆಗದುಕೊಳ್ಳಲ್ಪಡುವದು.

6. ದಿವಾನರವರ ತೀರ್ಮಾನ ಫಾಯಿಷ್ ಮಾಡಲ್ಪಟ್ಟಾಗ ಯಾವ ದರಖಾಸ್ತುದಾರರ ದರಖಾಸ್ತುಗಳು ತಿರಸ್ಕರಿಸಲ್ಪಟ್ಟಿರುತ್ತವೋ ಅಂತಾ ದರಖಾಸ್ತುದಾರರಿಂದ ಇಡಲ್ಪಟ್ಟ ಡಿಪಾಜಿಟ್‌ಗಳು, ಅವರು ಖಾಯಿಷ್ ಮಾಡಿದಾಗ ಅವರಿಗೆ ವಾಪಸ್ ಮಾಡಲ್ಪಡುವದು. ಚಡದರಖಾಸ್ತನ್ನಾಗಲಿ ಯಾವ ದರಖಾಸ್ತನ್ನಾಗಲಿ, ಯಾವ ಸಬಬನ್ನೂ ತಿಳಿಸದೇ ತಿರಸ್ಕರಿಸತಕ್ಕ ಸ್ವಾತಂತ್ರ್ಯವನ್ನು ದಿವಾನರವರು ತಮ್ಮಲ್ಲಿಯೇ ಉಳಿಸಿಕೊಂಡಿರುತ್ತಾರೆ.

7. ಯಾರ ದರಖಾಸ್ತು ಮಂಜೂರ್ಮಾಡಲ್ಪಡುತ್ತೋ ಅವರಿಗೆ ದಿವಾನರವರ ತೀರ್ಮಾನ ತಿಳಿಸಲ್ಪಟ್ಟ ತರುವಾಯ ಎಂಟು ದಿನಗಳೊಳಗಾಗಿ, 3 ವ 5ನೇ ಕಲಂಗಳ ಅನುಸರಿಸಿ ಮೊದಲು ಡಿಪಾಜಿಟ್ ಇಟ್ಟಿರುವ ಮೊಬಲಗ್ ದೇಖಿಲ್, ದರಖಾಸ್ತು ಮಾಡಲ್ಪಟ್ಟ ಸಾಲೀಯಾನಾ ಇಜಾರೇ ಮೊಬಲಗ್ ಪೈಕೀ ಹಾಗಪಾಲಿಗೆ ಸಮನಾಗಿರುವ ವಂದು ಮೊಬಲಗನ್ನು ನಗದಾಗಿಯಾಗಲಿ ಕ್ರಮ ಪ್ರಕಾರ ಮೈಸೂರು ಶೀಮೆಯ ದಿವಾನರವರ ಹೆಸರಿಗೆ ಇಂಡಾರಸ್ ಮಾಡಲ್ಪಟ್ಟ ಗವರ್ನಮೆಂಟ ಪತ್ರಗಳ ಮೂಲಕವಾಗಿಯಾಗಲಿ ಡೆಪ್ಯುಟಿ ಕಮ್ಮಿಷನರಲ್ಲಿ ಡಿಪಾಜಿಟ್ ಇಡತಕ್ಕದ್ದು. ಮತ್ತು ಇದರಲ್ಲಿ ಮುಂದೆ ವಿಧಿಸಲ್ಪಟ್ಟ ಷರತ್‌ಗಳನುಸರಿಸಿನಡದುಕೊಳ್ಳಲಿಕ್ಕೆ ಬದ್ಧನಾಗಿ ಮಾಮೂಲ್ ನಮೂನೆಯಲ್ಲಿ ಸರಿಯಾದ ಛಾಪಾ ಕಾಗದದ ಮೇಲೆ ವಂದು ಕರಾರ್ ಬರದುಕೊಡತಕ್ಕದ್ದು, ಆತನು ಕರಾರಿಗೆ ರುಜು ಮಾಡುವದಕ್ಕಾಗಲಿ, ಅಪೇಕ್ಷಿಸಲ್ಪಟ್ಟ ಡಿಪಾಜಿಟ್ ಇಡಲಿಕ್ಕಾಗಲಿ ತಪ್ಪಿದರೆ ಯಾ ನಿರಾಕರಿಸಿದರೆ, ಪೂರ್ವವೇ ಇಡಲ್ಪಟ್ಟ ಡಿಪಾಜಿಟ್‌ಗಳು ಗವರ್ನಮೆಂಟಿಗೆ ದಂಡವಾಗಿ ಸೇರಿಸಿಕೊಳ್ಳಲ್ಪಟ್ಟು, ಇಜಾರೆಯು, ತಪ್ಪಿಹೋದ ದರಖಾಸ್ತುದಾರನ ಲುಕ್ಸಾನಿಗೆ ವಳಪಟ್ಟು ಅನ್ಯಥಾ ವಿಲ್ಹಾ ಮಾಡಲ್ಪಡುವದು.

ಷರತ್ತುಗಳು.

I. ಸಾಲೀಯಾನಾ ... ರೇ ಮೊಬಲಗಿನ ಮೇಲೆ ರೂಪಾಯಿಗೆ ಮಂದಾಣೇ ಪ್ರಕಾರ ಆಗುವ, ವಿಧಿಸಲ್ಪಟ್ಟ ಲೋಕಲ್‌ಸೆಸ ದೇಖೀಲ್ ... ಸಾರೇ ಮೊಬಲಗನ್ನು ಅದು ಬಾಕೀ ಆಗುವ ತಿಂಗಳ ಮಾರನೇ ತಿಂಗಳ 15ನೇ ತಾರೀಖಿನಲ್ಲಾಗಲಿ ಅದಕ್ಕೆ ಮುಂ... ಾಗಲಿ, ಡಿಸ್ಟ್ರಿಕ್ಟು ಖಜಾನೆಯಲ್ಲಿ ಮಾಹೇಯಾನಾ ಸಮನಾದ ಖಿಸ್ತು ಪ್ರಕಾರ ಪಾವತೀ ಮಾಡಲ್ಪಡತಕ್ಕ... ದರೀ ತಾರೀಖಿನಲ್ಲಿ ನಿಲ್ಲತಕ್ಕ ತಮಾಂ ಬಾಕಿಗಳಿಗೂ ಸೇಕಡಾ ಸಾಲೀಯಾನಾ 6 ರೂಪಾಯಿಗಳ ಪ್ರಕಾರ ಬಡ್ಡೀ ... ತಕ್ಕದ್ದು. ಅಂತಾ ಬಾಕೀ ಮೊಬಲಗುಗಳ ಪಾವತೀಯಾಗತಕ್ಕ ತಿಂಗಳು ಕಳೆದಮೇಲೆ ಪಾವತೀಯಾಗದೆ ನಿಂತರೆ ಅವುಗಳು ಜಮೀನ ಕಂದಾಯದ ಬಾಕೀ ವಸೂಲಿಗೋಸ್ಕರ ಹಾಲೀ ಜಾರೀ ಇರುವ ರೂಲ್ಸನಲ್ಲಿ ವಿಧಿಸಲ್ಪಟ್ಟ ರೀತಿಯಾಗಿ ಇಜಾರೇದಾರನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲಾಗತಕ್ಕದ್ದು. ಮತ್ತು ಯಕ್ಸೈಜ್ ಕಮ್ಮಿಷನರವರ ಮೂಲಕ ದಿವಾನರವರ ಮಂಜೂರಾತಿಯನ್ನು ಪಡೆದು ಇಜಾರಾ ರದ್ದಾಗಿರುತ್ತೆಂದು ತಿಳಿಸುವದಕ್ಕೂ, ಅದನ್ನು ಮರಳಿ ಹರಾಜ್ ಹಾಕುವದಕ್ಕೂ, ಯಾ ಅಮಾನಿ ಕೆಳಗೆ ಇಟ್ಟುಕೊಳ್ಳುವದಕ್ಕೂ, ಬಡ್ಡೀ ದೇಖೀಲ್ ತಮಾಂ ಬಾಕಿಗಳನ್ನೂ ಹಾಲಿ ಇಜಾರೇ ಪುನಃ ಹರಾಜ್ ಹಾಕುವದರಿಂದಾಗಲಿ ಇತರ ವಿಲೇ ಮಾಡುವದರಿಂದಾಗಲಿ ಉಂಟಾಗತಕ್ಕ ಯಾವದಾದರೂ ನಷ್ಟಗಳನ್ನೂ ಜಾಮೀನ ಮೊಬಲಗು ಸರಕಾರಕ್ಕೆ ಸೇರಿಸಿಕೊಳ್ಳುವದರ ಮೂಲಕವಾಗಿಯೂ, ಜರೂರಿದ್ದಲ್ಲಿ ಕಂದಾಯದ ಬಾಕೀ ವಸೂಲೀ ಬಗ್ಯೆ ಜಾರೀ ಇರುವ ರೂಲ್ಸ ಅನುಸರಿಸಿ ಬಾಕೀ ಕೊಡಲಿಕ್ಕೆ ತಪ್ಪಿದವನ ಸ್ವತ್ತಿನ ಜಫ್ತೀ ಹರಾಜ್ ಮೂಲಕ ವಸೂಲ್ ಮಾಡುವದಕ್ಕೂ ಡೆಪ್ಯುಟಿ ಕಮ್ಮಿಷನರವರಿಗೆ ಯಖ್ತ್ಯಾರಿ ಇರತಕ್ಕದ್ದು.

II. ಚಿಲ್ಲರೇ ಬಿಕ್ರೀದಾರ್ರಿಗೆ ಡೆಪ್ಯುಟಿ ಕಮ್ಮಿಷನರವರಿಂದ ಮಾಮೂಲ್ ಲೈಸೆನ್ಸಗಳು ವಿಧಿಸಲ್ಪಟ್ಟ ನಮೂನೆಯಲ್ಲಿ ಕೊಡಲ್ಪಡುವವು, ಮತ್ತು ಡೆಪ್ಯುಟಿ ಕಮ್ಮಿಷನರವರ ಕಂಠೋಕ್ತವಾದ ಮಂಜೂರಾತಿ ಇಲ್ಲದೆ, ಇಜಾರೇದಾರನು ಹಾಲೀ ಶೇಂದಿ ಬಿಕ್ರಿ ಬಗ್ಯೆ ಇಡಲ್ಪಟ್ಟಿರುವ ಚಿಲ್ಲರೇ ಅಂಗಡಿಗಳಿರತಕ್ಕ ಸ್ಥಳದ ವಿಷಯದಲ್ಲಾಗಲಿ, ಸಂಖ್ಯೆಯ ವಿಷಯದಲ್ಲಾಗಲಿ ಯಾವ ಬದಲಾವಣೆಯನ್ನೂ ಮಾಡಕೂಡದು. ಸರಕಾರದ ಅವಶ್ಯಕತೆಯ ಸಬಬ್‌ಗಳಮೇಲೆ ಯಾವ ಅಂಗಡಿಗಳನ್ನಾದರೂ ಮುಚ್ಚುವಂತೆ ಹುಕ್ಕುಂ ಮಾಡುವದಕ್ಕೆ ಡೆಪ್ಯುಟಿ ಕಮ್ಮಿಷನರು ಅರ್ಹರಾಗಿರುತ್ತಾರೆ. ಮತ್ತು ಇಜಾರೆದಾರನು ಆ ಬಗ್ಯಾಗಿ ಯಾವ ಈಡು ಮೊಬಲಗನ್ನೂ ಕೇಳಕೂಡದು.

III. ಶೇಂದಿಗೆ ಬದಲಾಗಿ ಅಥವಾ ಆಧಾರವಾಗಿ ಧಾನ್ಯವನ್ನಾಗಲಿ, ಸರಕುಗಳನ್ನಾಗಲಿ, ಒಡವೆಗಳನ್ನಾಗಲಿ, ಧರಿಸತಕ್ಕ ಬಟ್ಟೆಗಳನ್ನಾಗಲಿ, ಇತರ ಸ್ವತ್ತನ್ನಾಗಲಿ, ತೆಗದುಕೊಳ್ಳಕೂಡದು.

IV. ಇಜಾರೆದಾರನು ಮೈಸೂರು ಗವರ್ನಮೆಂಟಿನವರಿಂದ ಆಗಿಂದಾಗ್ಯೆ ವಿಧಿಸಲ್ಪಡಬಹುದಾದ ಯಾವ ಜಾಸ್ತೀ ರೂಲ್ಸಿಗಾಗಲಿ ಬದ್ಧನಾಗಿ ನಡೆದುಕೊಳ್ಳತಕ್ಕದ್ದು.

V. ಪೂರ್ವವೇ ನಿರ್ಣಯಿಸಲ್ಪಟ್ಟು ವಿವರಿಸಲ್ಪಟ್ಟಿರುವಂತೆ, ತಮ್ಮ ಗ್ರಾಮಗಳ ಸರಹದ್ದುಗಳೊಳಗೆ, ಅಂಥಾ ಹಕ್ಕುದಾರಿಗಳನ್ನು ಚಲಾಯಿಸುವದಕ್ಕೆ ಸನ್ನದ್ ವಗೈರೆಗಳಿಂದ ಅಧಿಕಾರ ಕೊಡಲ್ಪಟ್ಟ ಜೋಡಿ, ಸರ್ವಮಾನ್ಯ, ಕಾ... ಮಗಳ ಹಿಡುವಳೀದಾರರ ಹಕ್ಕುದಾರಿಗಳು ಇಜಾರೇದಾರನು ಉಂಟಾಗಿದ್ದು ಅವುಗಳನ್ನು ಚಲಾಯಿಸುವ ಬ... ರಾ ಸ್ವಾತಂತ್ರ್ಯವನ್ನು ಉಂಟಾಗಿರತಕ್ಕದ್ದು. ಮೇಲ್ಕಂಡ ಇನಾಂದಾರ್ರಗಳಿಗೆ ಸಲ್ಲಬೇಕಾದ ಶೇಂದಿ ಹುಟ್ಟುವಳಿ... ಇಜಾರೇದಾರನು ಅಂಥಾ ಇನಾಂದಾರರುಗಳ ಶೇಂದೀ ಹಕ್ಕುದಾರಿಗಳನ್ನು ಚಲಾಯಿಸಿದಾಗ್ಯೂ ಸರಿಯೆ ಅಥವಾ ಇಲ್ಲದಿದ್ದರೂ ಸರಿಯೆ ಇಜಾರೇದಾರನಿಂದ ಪಾವತೀ ಮಾಡಲ್ಪಡತಕ್ಕದ್ದು. ಮತ್ತು ಅಂಥಾ ಮೊಬಲಗಿಗಾಗಿ ಇನಾಂದಾರ್ರಿಗೂ ಇಜಾರೇದಾರ್ರಿಗೂ ವಿಶೇಷ ಮಹಾಬಡಿಕೆ ಯಾವದು ಇಲ್ಲದ ಪಕ್ಷಕ್ಕೆ ಜಾರಿಯಲ್ಲಿರತಕ್ಕ ರೂಲ್ಸು ಅನುಸರಿಸಿ ಮೊಬಲಗು ಗೊತ್ತು ಮಾಡಲ್ಪಡತಕ್ಕದ್ದು. ಮತ್ತು ಅಂಥಾ ರೂಲ್ಸು ಯಾವದೂ ಇಲ್ಲದ ಪಕ್ಷಕ್ಕೆ ಮಾಮೂಲ್ ಅನುಸರಿಸಿ ಗೊತ್ತು ಮಾಡಲ್ಪಡತಕ್ಕದ್ದು. ಶೇಂದಿ ಹುಟ್ಟುವಳಿ ಬಗ್ಯೆ ಇನಾಂದಾರರ ಹಕ್ಕುದಾರೀ ವಿಷಯದಲ್ಲಾಗಲಿ, ಅಥವಾ ಇನಾಂದಾರ್ರಿಗೆ ಇಜಾರೇದಾರನಿಂದ ಸಲ್ಲಬೇಕಾದ ಶೇಂದೀ ಹುಟ್ಟುವಳಿ ಮೊಬಲಗಿನ ಪರಸ್ಪರ ವಿಷಯದಲ್ಲಾಗಲಿ, ಇನಾಂದಾರರಿಗೂ ಇಜಾರೇದಾರರಿಗೂ ತಕರಾರು ಸಂಭವಿಸಿದರೆ ಅಂಥಾ ತಕರಾರು ಕುರಿತು ಆ ವುಭಯತ್ರರ ಪೈಕಿ ಯಾರಿಂದಾಗಲಿ ಫಿರ್ಯಾದು ಬಂದಮೇಲೆ ಡೆಪ್ಯುಟಿ ಕಮ್ಮಿಷನರವರು ಯುಕ್ತವಾಗಿಯೂ ಮತ್ತು ನ್ಯಾಯವಾಗಿಯೂ ಫೈಸಲ್ಮಾಡತಕ್ಕದ್ದು. ಮತ್ತು ಇಜಾರೇದಾರನು ಅಂಥಾ ಫೈಸಲಿಗೆ ಬದ್ಧನಾಗಿರತಕ್ಕದ್ದು. ಪರಂತು ಸದರೀ ಫೈಸಲ್ ಅಪ್ಪೀಲ್‌ನಲ್ಲಿ ಗವರ್ನಮೆಂಟಿನಿಂದ ಕಾಯಂ ಮಾಡಲ್ಪಡಲಿಕ್ಕಾಗಲಿ, ಅನ್ಯಥಾ ಆಗಲಿ ಗುರಿಯಾಗತಕ್ಕದ್ದು. ಅಂಥಾ ಫೈಸಲಾತಿಯಲ್ಲಿ ಡೆಪ್ಯುಟಿ ಕಮ್ಮಿಷನರವರಿಂದ ಅಥವಾ ಅಪ್ಪೀಲ್‌ನಲ್ಲಿ ಗವರ್ನಮೆಂಟಿನವರಿಂದ ಚಲಾಯಿಸಲ್ಪಡಬೇಕೆಂತ ಹುಕ್ಕುಂ ಮಾಡಲ್ಪಟ್ಟ ಮೊಬಲಗು ಜಮೀನ ಕಂದಾಯ ಬಾಕೀ ವಸೂಲೀ ಬಗ್ಯೆ ತತ್ಕಾಲದಲ್ಲಿ ಜಾರೀ ಇರತಕ್ಕ ರೂಲ್ಸ ಅನುಸರಿಸಿ ಯಿಜಾರೇದಾರನಿಂದ ವಸೂಲ್ಮಾಡಲ್ಪಡತಕ್ಕದ್ದು.

VI. ಬೆಳಿಗ್ಯೆ 6 ಘಂಟೆಗೆ ಮುಂದಾಗಿ ಶೇಂದೀ ಅಂಗಡಿಗಳ್ಯಾವವೂ ತೆರಿಯಲ್ಪಡಕೂಡದು, ಮತ್ತು ತಮಾಂ ಅಂಗಡಿಗಳೂ ಡೆಪ್ಯುಟಿ ಕಮ್ಮಿಷನರವರಿಂದ ವಿಶೇಷ ಸಂದರ್ಭಗಳಲ್ಲಿ ಅನ್ಯಥಾ ಹುಕ್ಕುಂ ಮಾಡಲ್ಪಟ್ಟ ಹೊರ್ತು, ರಾತ್ರಿ 9 ಘಂಟೆಗೆ ಮುಚ್ಚಲ್ಪಡತಕ್ಕದ್ದು.

VII. ಯೂರೋಪಿಯನ್ ಸೋಲ್ಜರುಗಳ ಒಂದು ರಿಜಿಮೆಂಟ್ ಯಾ ತುಕಡಿ ಹೋಗುತ್ತಿರುವಲ್ಲಿ ಅಥವಾ ಆಪ್ರಾಂತ್ಯದಲ್ಲಿ ಸದ್ಯಃ ಮೊಕ್ಕಾಂ ಮಾಡಿರುವಾಗ ಮಾರ್ಗದೊಳಗೆ ಅಥವಾ ಅದರ ಸಮೀಪದೊಳಗೆ ಶೇಂದೀ ಬಿಕ್ರಿ ಬಗ್ಯೆ ಇರುವ ತಮಾಂ ಅಂಗಡಿಗಳೂ ಮುಚ್ಚಲ್ಪಡತಕ್ಕದ್ದು. ಮತ್ತು ಹಾಗೆ ಮುಚ್ಚುವದರಿಂದ ಉಂಟಾಯಿತೆಂಬ ಅಥವಾ ಉಂಟು...

VIII. ಇಜಾರೇದಾರನು ಸರಕಾರದ ಬಂಜರ್ ಜಮೀನಲ್ಲಿ ಇರುವ ಈಚಲು ಮರಗಳನ್ನು, ಇಜಾರೆಗಳ ಸ್ಥಳ ಸರಹದ್ದಿನೊಳಗೆ ಪುರೋಖ್ತು ಬಗ್ಯಾಗಲೀ ಬೆಲ್ಲ ತಯಾರ್ ಮಾಡುವ ಬಗ್ಯಾಗಲಿ ಶೇಂದೀ ಇ[illegible]ಸುವದಕ್ಕೋಸ್ಕರ ಉಪಯೋಗಿಸಿಕೊಳ್ಳಬಹುದು. ಪರಂತು ಸಾಗುವಳಿಗೋಸ್ಕರವಾಗಲಿ, ಇತರ ಕಾರ್ಯಕ್ಕಾಗಲಿ ಈಗ ಅ[illegible]ವಿಸಲ್ಪಡುವ ಅಥವಾ ಇಂದಿಂದ ಅನುಭವಿಸಲ್ಪಡತಕ್ಕ ಜಮೀನ್ಗಳಲ್ಲಿರುವ ಈಚಲು ಮರಗಳಿಗೆ ಅವನಿಗೆ ಹಕ್ಕುರುವದಿಲ್ಲ; [illegible] ಗವರ್ನಮೆಂಟಿನವರು ಯಾವಾಗಲಾದರೂ ಇತರ ಕೆಲಸಗಳಿಗೋಸ್ಕರವಾಗಲಿ, ಇತರ ತಾಲ್ಲೂಕುಗಳಿಗೆ ಶೇಂದೀ ವದ[illegible]ಕ್ಕೋಸ್ಕರವಾಗಲಿ ಉಳಿಸಿಕೊಳ್ಳುವದು ಜರೂರೆಂದು ಭಾವಿಸುವಂಥಾ ಯಾವ ಈಚಲು ಮರಗಳಿಗೋಸ್ಕರವಾಗಲಿ, ತ[illegible]ಾಗಿಯಾಗಲಿ ಈಡು ಕೇಳುವದಕ್ಕೆ ಹಕ್ಕಿರುವದಿಲ್ಲ. ಡೆಪ್ಯುಟಿ ಕಮಿಷನರವರು ಆಗಿಂದಾಗ್ಯೆ ನಿಯಮಿಸುವ ಸ್ಥಳಗ[illegible] ಷರತ್‌ಗಳ ಪ್ರಕಾರವೂ ಮಾತ್ರವೇ ಬೆಲ್ಲ ತಯಾರ್ಮಾಡಲ್ಪಡತಕ್ಕದ್ದು.

IX. ಇಜಾರೇದಾರನು ಪ್ರತಿ ತಾಲ್ಲೂಕಿಗೂ ಸಾಜಾ ಮತ್ತು ಕರಾರ್‌ವಾಕಾ ಲೆಕ್ಕಗಳು ಇಡತಕ್ಕದ್ದು ಅ; ವುಗಳಲ್ಲಿ (1) ಶೇಂದೀ ಇಳಿಸಲ್ಪಟ್ಟ ಶೇಂದೀ ತೋಪುಗಳ ಹೆಸರುಗಳು ವ ಅವುಗಳಿರತಕ್ಕ ಸ್ಥಳ, (2) ಶೇಂದೀ ಕಟ್ಟಿದ ಮರಗಳ ಸಂಖ್ಯೆ, (3) ರೋಜೀನಾ ಉತಾರ್ ಮಾಡಲ್ಪಟ್ಟ ಶೇಂದಿಯ ತೇದಾದು, (4) ರೋಜೀನಾ ಬಿಕರಿಮಾಡಲ್ಪಟ್ಟ ಶೇಂದಿಯ ತೇದಾದು, ಮತ್ತು (5) ಶೇಂದಿಯು ಸರಬರಾಯಿ ಮಾಡಲ್ಪಟ್ಟ ದುಕಾನ್ಗಳ ಹೆಸರುಗಳು ಈ ಬಾಬತು ತಪಶೀಲ್‌ಗಳು ತೋರಿಸತಕ್ಕದ್ದು. ಈ ಬಾಬತು ಲೆಕ್ಕಗಳು ಅಮಲ್‌ದಾರರಿಂದಾಗಲಿ ಯಾ ಆ ಬಗ್ಯಾಗಿ ಡೆಪ್ಯುಟಿಕಮ್ಮಿಷನರವರಿಂದ ಮೊಕರರ್ ಮಾಡಲ್ಪಟ್ಟ ಇತರ ಯಾವ ಆಫೀಸರರಿಂದಾಗಲೀ ತನಿಖೇ ನೋಡಲ್ಪಡತಕ್ಕ ಬಗ್ಯೆ ಖುಲ್ಲಾ ಇರತಕ್ಕದ್ದು, ಮತ್ತು ಇವುಗಳ ನಕಲು ಡೆಪ್ಯುಟಿ ಕಮ್ಮಿಷನರಿಂದಾಗಲಿ ಅಮಲ್‌ದಾರರಿಂದಾಗಲಿ ಅಪೇಕ್ಷಿಸಲ್ಪಟ್ಟರೆ ಅವು ಗವರ್ನಮೆಂಟಿನಿಂದ ವಿಧಿಸಲ್ಪಡುವ ನಮೂನೆಯಲ್ಲಿ ಇಜಾರೇದಾರನಿಂದ ಹಾಜರ್ಮಾಡಲ್ಪಡತಕ್ಕದ್ದು.

X. ಬಿಯರ್ ಸಾರಾಯಿ ವಿಷಯದಲ್ಲಾಗಲೀ ಶೇಂದೀ ವಿನಾ ಇತರ ತರಹೇಯ ಷರಾಬ್ ಯಾ ಸ್ಪಿರಿಟ್‌ಗಳ ವಿಷಯದಲ್ಲಾಗಲಿ, ಗವರ್ನಮೆಂಟಿನವರು ಮಾಡತಕ್ಕ ಯಾವ ಯೇರ್ಪಾಡುಗಳಿಗೋಸ್ಕರವೂ ಇಜಾರೇದಾರನು ಈಡಿಗೆ ಯಾ ಸೋಡಿಗೆ ಬಾಧ್ಯತೆವುಳ್ಳವನಾಗಿರುವದಿಲ್ಲ. ಒಂದು ತಾಲ್ಲೂಕು ಪೈಕೀ ಯಾವ ಬಾಗಗಳಲ್ಲಾಗಲಿ ಸರ್ಕಾರೀ ಕಾರಣಗಳ ಮೇಲೆ ಇಜಾರೇಯನ್ನು ಮೌಕೂಫ್‌ಮಾಡಿ ಆ ಬಗ್ಯೆ ನ್ಯಾಯವಾದ ಈಡು ಮೊಬಲಗು ಕೊಡತಕ್ಕ ಅಧಿಕಾರವನ್ನು ದಿವಾನರವರು ತಮ್ಮಲ್ಲಿಯೇ ವುಳಿಸಿಕೊಂಡಿರುತ್ತಾರೆ.

XI. ಯಾವ ಯುರೋಪಿಯನ್ ಸೋಲ್ಜರಿಗಾಗಲಿ, ನಾವಿಗನಿಗಾಗಲಿ, ಯೂರೋಪಿಯನ್ ಯಾ ಯೂರೇಷಿಯನ್ ಹೆಂಗಸು ಯಾ ಮಗುವಿಗಾಗಲಿ, ಅಥವಾ ಕೆಲಸದ ಮೇಲಿರುವಲ್ಲಿ ಒಬ್ಬ ಸಿಪಾಯಿಗಾಗಲಿ, ಪೊಲೀಸಿನವನಿಗಾಗಲಿ, ತಿಳಿದು ಶೇಂದಿಯನ್ನು ಮಾರಕೂಡದು; ಯಾ ಕೊಡಕೂಡದು, ಮತ್ತು ಈ ನಿಬಂಧನೆಗೆ ಯಾವ ಬರಖಿಲಾಫಾಗಲಿ ನಡೆದಲ್ಲಿ ಅದರಿಂದ ಇಜಾರೇದಾರನು ಯಾ ಬಿಕರೀದಾರನು ಪ್ರತ್ಯೇಕವಾಗಿ ಯಾ ಸಮಷ್ಟಿಯಾಗಿ ಮೊದಲನೆಯ ಅಪರಾಧಕ್ಕೆ 50 ರೂಪಾಯಿಗಳ ಜುರ್ಮಾನೆಗೂ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಗುರಿಯಾಗುವದಲ್ಲದೆ ಬಿಕರೀದಾರನ ಲೈಸೆನ್ಸ್ ರದ್ದಾಗಲಿಕ್ಕೂ ಗುರಿಯಾಗಿರತಕ್ಕದ್ದು.

[illegible] ಜಾರೇದಾರನು ತನ್ನ ನೌಕರರು ಯಾ ಮುತಾಲೀಕರು ಭೂಮಿಯಿಂದ ಗರೀ ಬಿಡುವ ಭಾಗದವರೆಗೆ ಒಂದು ಗಜದ ಯತ್ತರಕ್ಕಿಂತ ಕಡಮೆಯಾ[illegible] ಬುಡದಭಾಗಗಳುಳ್ಳ ಎಳೇ ಈಚಲು ಮರಗಳಿಂದ ಶೇಂದಿ ಇಳಿಸದೇಯೂ ಮತ್ತು ಶೇಂದಿ ಇಳಿಸುವದಕ್ಕೋಸ್ಕರ ಬೇಕಾದ ಗರಿಗಳು ಹೊರ್ತು ಅನ್ಯಥಾ ಗರಿಗಳು ಕತ್ತರಿಸದೆಯೂ, ಉಪಯೋಗಿಸದೆಯೂ, ಇರುವ ಬಗ್ಯೆ ಜವಾಬ್‌ದಾರನಾಗಿರತಕ್ಕದ್ದು. ಮತ್ತು ಯಾವ ಮರಗಳನ್ನಾಗಲಿ ಅವು ಸತ್ತು ಹೋಗುವಂತೆ ಅಜಾಗ್ರತೆಯಾಗಿ ಕಟ್ಟಕೂಡದು; ಈ ನಿಬಂಧನೆಗಳಿಗೆ ವಿನಾದರೂ ಬರಖಿಲಾಫ್ ನಡದರೆ ಅದರಿಂದ, ಮೊದಲನೇ ತಪ್ಪಿತಕ್ಕೆ 50 ರೂಪಾಯಿಗಳ ಜುರ್ಮಾನೆಗೂ ಆ ತರುವಾಯ ನಡೆಯುವ ಪ್ರತಿ ತಪ್ಪಿತಕ್ಕೂ 100 ರೂಪಾಯಿಗಳ ಜುರ್ಮಾನೆಗೂ ಇಜಾರೇದಾರನು ಗುರಿಯಾಗಿರತಕ್ಕದ್ದು.

XIII. ಶೇಂದಿಯು ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಜನಗಳಿಗೆ ಮಾರಲ್ಪಡತಕ್ಕದ್ದು:—

	ಶೇರು ಒಂದಕ್ಕೆ ಕ್ರಯ.	
	ಜಾಸ್ತೀ.	ಕಮ್ಮಿ.
	ರೂ. ಆ. ಪೈ.	ರೂ. ಆ. ಪೈ.
ತಾಲ್ಲೂಕು ಕಸಬೆಗಳಲ್ಲಿ ಮತ್ತು ಗಾವಗಾನೆಗಳಲ್ಲಿ	0—1—0	0—0—6

8. ಶೇಂದಿ ಸಾಗಿಸುವಬಗ್ಯೆ ಉಪಯೋಗಿಸಲ್ಪಡುವ ಬಂಡೀಗಳು, ಅವುಗಳಿಗಾಗಿ ವಿಧಿಸಲ್ಪಟ್ಟ ಮೊಹತರ್ಫಾ ಬಂಡೀ ಕಂದಾಯದ ವಸೂಲಿಯಿಂದ ವಿನಾಯಿಸಲ್ಪಟ್ಟಿರುವದಿಲ್ಲ.

9. ಸರ್ 1886—87ನೇ ಇಸವಿ ಲಾಗಾಯಿತು ಸಾಲಿಯಾನಾ ಶೇಂದೀ ಹುಟ್ಟುವಳಿಯು ಇದರಡಿ ನಮೂದಿಸಲ್ಪಟ್ಟಿರುತ್ತೆ. ಇತರ ಯಾವದಾದರೂ ವಿಷಯವನ್ನು ಕುರಿತ ಸಂಗತಿಯನ್ನು, ಡೆಪ್ಯುಟಿ ಕಮ್ಮಿಷನರವರ ಆಫೀಸಿನಲ್ಲಿ ಕೇಳಿ ತಿಳದುಕೊಳ್ಳಬಹುದು.

1886—87	ರೂ.	76,924	1888—89	ರೂ.	96,000
1887—88	„	96,000	1889—90	„	96,000

ಹುಕುಂ ಬಮೋಜೀಬ್,

ಯನ್. ಕೃಷ್ಣರಾವ್,